# ಅನಂತ ಜನಶಕ್ತಿ

ಸಂಪಾದಕ: ಎಸ್.ವೆಂಕಟೇಶುಲು

EDITOR : S VENKATESULU

ANANTHA JANA SAKTHI KANNADA DAILY ಕನ್ನಡ ದಿನಪತ್ರಿಕೆ

ಸಂಪುಟ : 01 ಸಂಚಿಕೆ : 50 ರಿ.ನಂ : ಕೆಎನ್‌ಎಎನ್ / 26 / ಎ5487 ಬಳ್ಳಾರಿ ಶನಿವಾರ ದಿನಾಂಕ : 29-08-2026 ಪುಟ : 04 ಬೆಲೆ : 2-00


## ವಿಮಾನದ ಟೈರ್ ಸ್ಫೋಟ, ಕೂದಲೆಳೆ ಅಂತರದಲ್ಲಿ ಪಾರಾದ 41 ಪ್ರಯಾಣಿಕರು!

ಬಿಲಾಸ್‌ಪುರ: ಛತ್ತೀಸ್ ಗಢದಲ್ಲಿ ಸಂಭಾವ್ಯ ದುರಂತವೊಂದು ತಪ್ಪಿದೆ. ಲ್ಯಾಂಡಿಂಗ್ ವೇಳೆ ವಿಮಾನದ ಟೈರ್ ಸ್ಫೋಟಗೊಂಡಿದ್ದು, ಕೂದಲೆಳೆ ಅಂತರದಲ್ಲಿ 41 ಪ್ರಯಾಣಿಕರು ಪಾರಾಗಿರುವ ಘಟನೆ ನಡೆದಿದೆ. ಶುಕ್ರವಾರ ದೆಹಲಿಯಿಂದ ಬಿಲಾಸ್‌ಪುರಕ್ಕೆ ತೆರಳುತ್ತಿದ್ದ ವಿಮಾನವೊಂದು ಉತ್ತರ ಛತ್ತೀಸ್‌ಗಢದ ಬಿಲಾಸ್‌ಪುರ ವಿಮಾನ ನಿಲ್ದಾಣದಲ್ಲಿ ಲ್ಯಾಂಡಿಂಗ್ ಆಗುವಾಗ ಈ ಘಟನೆ ನಡೆದಿದೆ.

ಅಲಯನ್ಸ್ ಏರ್ ನಿರ್ವಹಿಸುತ್ತಿದ್ದ 9ಐ613 ವಿಮಾನ ಬೆಳಿಗ್ಗೆ 11 ಗಂಟೆ ಸುಮಾರಿಗೆ ಲ್ಯಾಂಡಿಂಗ್ ಆಗುವಾಗ ಅದರ ಟೈರ್ ಸ್ಫೋಟಗೊಂಡಿದೆ. ಆ ವಿಮಾನದಲ್ಲಿ 37 ಪ್ರಯಾಣಿಕರು ಮತ್ತು ನಾಲ್ವರು ಸಿಬ್ಬಂದಿ ಇದ್ದರು ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ವಿಮಾನ ಲ್ಯಾಂಡಿಂಗ್ ಆಗುವಾಗ ಅದರ ಎಡಭಾಗದ ಟೈರ್ ಸ್ಫೋಟಗೊಂಡಿದೆ. ಘಟನೆಯ ನಂತರ ಎಲ್ಲಾ ಪ್ರಯಾಣಿಕರು ಮತ್ತು ಸಿಬ್ಬಂದಿಯನ್ನು ಸುರಕ್ಷಿತವಾಗಿ ಹೊರಗೆ ಕರೆತರಲಾಗಿದ್ದು, ರನ್‌ವೇಯಿಂದ ಟರ್ಮಿನಲ್ ಕಟ್ಟಡಕ್ಕೆ ಸ್ಥಳಾಂತರಿಸಲಾಯಿತು.

ಬಳಿಕ ಬಿಲಾಸ್‌ಪುರದಿಂದ ಮುಂದಿನ ಪ್ರಯಾಣಕ್ಕಾಗಿ ನಿಗದಿಯಾಗಿದ್ದ ವಿಮಾನದ ಹಾರಾಟವನ್ನು ವಿಮಾನಯಾನ ಸಂಸ್ಥೆಯು ರದ್ದುಗೊಳಿಸಿತು. ಘಟನೆಗೆ ಸಂಬಂಧಿಸಿದ ಹೆಚ್ಚಿನ ವಿವರಗಳನ್ನು ನಿರೀಕ್ಷಿಸಲಾಗುತ್ತಿದೆ ಎಂದು ಅವರು ಹೇಳಿದರು.





# ಡಿಕೆಶಿ ಸರ್ಕಾರದ ಮೊದಲ ವಿಕೆಟ್ ಪತನ:

## ಕಣ್ಣೀರಿಡುತ್ತಲೇ ಸಚಿವ ಸ್ಥಾನಕ್ಕೆ ರಾಜೀನಾಮೆ ಘೋಷಿಸಿದ ನಾಗೇಂದ್ರ; ಬಿಜೆಪಿ ಹೋರಾಟಕ್ಕೆ ಜಯ!

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಕೋಟ್ಯಂತರ ರೂಪಾಯಿ ದುರುಪಯೋಗದ ಆರೋಪ ಎದುರಿಸುತ್ತಿರುವ ಸಚಿವ ಬಿ. ನಾಗೇಂದ್ರ ಅವರು ಶುಕ್ರವಾರ ಸಂಜೆ ಕೊನೆಗೂ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಇದರೊಂದಿಗೆ ನಾಗೇಂದ್ರ ರಾಜೀನಾಮೆಗೆ ಆಗ್ರಹಿಸಿ ಸದನದ ಒಳಗೆ ಮತ್ತು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಪ್ರತಿಭಟನೆ ನಡೆಸಿದ್ದ ಬಿಜೆಪಿ ಹೋರಾಟಕ್ಕೆ ಜಯ ಸಿಕ್ಕಂತಾಗಿದೆ.

ಇಂದು ಮಧ್ಯಾಹ್ನ ದೆಹಲಿಯಿಂದ ಆಗಮಿಸಿದ ಬಳಿಕ ಸಂಜೆ ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ನಾಗೇಂದ್ರ, ಮನುವಾದಿಗಳ ಕುತಂತ್ರದಿಂದ ನಾನು ಮೂರು ತಿಂಗಳು ಜೈಲಿಗೆ ಹೋಗಿದ್ದೆ ಎಂದು ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಪ್ರತಿಪಕ್ಷ ಬಿಜೆಪಿ ಸದನ ನಡೆಯೋಕೆ ಬಿಡಲಿಲ್ಲ. ಸದನವನ್ನು ಹಾಳು ಮಾಡಿದರು.

ಸಂವಿಧಾನ ವಿರೋಧಿ ಈಗಲೂ ಮನುಸ್ಮೃತಿ ಜಾರಿಗೆ ಪ್ರಯತ್ನಿಸುತ್ತಿವೆ. ಇದು ವೇದ ಕಾಲ ಅಲ್ಲ. ಪುರಾಣ ಕಾಲ ಅಲ್ಲ. ಸಂವಿಧಾನ ಕಾಲ, ಅಂಬೇಡ್ಕರ್ ಯುಗ ಇದು. ಉತ್ತರಕಾಂಡದಲ್ಲಿ ಶಂಭುಕ ಹತ್ಯೆಯಾಯ್ತು. ಇವತ್ತು ಶಂಭುಕ ಹತ್ಯೆ ಆಗಲ್ಲ. ರಕ್ಷಣೆಗೆ ಸಂವಿಧಾನ ಇದೆ. ಮನುಸ್ಮೃತಿಗಳು ಶಂಭುಕ ಹತ್ಯೆ ಮಾಡಿದ ರೀತಿ ಆಗಲ್ಲ. ದಲಿತರು, ಕ್ಷುದ್ರರು, ಆದಿವಾಸಿಗಳು, ಅಲ್ಪಸಂಖ್ಯಾತರು ಬದುಕಬಾರದು ಅನ್ನೋದು ಮನುಸ್ಮೃತಿ ಬಿಜೆಪಿ ಅವರ ಮನಸ್ಥಿತಿ. ಆದರೆ, ಸಂವಿಧಾನ ನಮ್ಮ ರಕ್ಷಣೆ ಮಾಡುತ್ತದೆ ಎಂದು ಬಿಜೆಪಿ ವಿರುದ್ಧ ಹರಿಹಾಯ್ದರು.

ದೆಹಲಿಗೆ ತೆರಳಿದ್ದ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ನಾಗೇಂದ್ರ ರಾಜೀನಾಮೆ ಸಂಬಂಧಿಸಿದಂತೆ ಪಕ್ಷದ ವರಿಷ್ಠರ



ಜೊತೆ ಮಹತ್ವದ ಸಮಾಲೋಚನೆ ನಡೆಸಿದ್ದರು. ಅಲ್ಲದೆ ಪಕ್ಷ ಹಾಗೂ ಸರ್ಕಾರದ ಹಿತದೃಷ್ಟಿಯಿಂದ ನಾಗೇಂದ್ರ ಅವರು ರಾಜೀನಾಮೆ ನೀಡುವುದೇ ಸೂಕ್ತ ಎಂಬ ಸಂದೇಶವನ್ನು ನೀಡಿದ್ದರು ಎನ್ನಲಾಗಿದೆ.

ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಚಿವ ಸಂಪುಟದಲ್ಲಿ ಸಚಿವರಾಗಿದ್ದ ಬಿ ನಾಗೇಂದ್ರ ಅವರು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಗರಣ ಸಂಬಂಧ ಜೂನ್ 6, 2024ರಂದು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಬಳಿಕ ಸಿಎಂ ಡಿಕೆ ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ಮತ್ತೆ ಸಚಿವರಾಗಿ ಆಗಸ್ಟ್ 3, 2026ರಂದು ಪ್ರಮಾಣವಚನ ಸ್ವೀಕರಿಸಿದ್ದರು. ಆದರೆ ಇದ-ಕ್ಕೆ ಪ್ರತಿಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದವು ಮತ್ತು ನಾಗೇಂದ್ರ ರಾಜೀನಾಮೆ ಪಟ್ಟು ಹಿಡಿದಿದ್ದವು. ಹೀಗಾಗಿ ನಾಗೇಂದ್ರ ಅವರು ಇಂದು ರಾಜೀನಾಮೆ ನೀಡಿದ್ದಾರೆ. ಆ ಮೂಲಕ ಒಂದೇ ಹಗರಣ ಸಂಬಂಧ ಎರಡು ಬಾರಿ ಸಚಿವ ಸ್ಥಾನ ಕಳೆದುಕೊಂಡಂತಾಗಿದೆ.

## ನಾಡಗೀತೆ: ಹೈಕೋರ್ಟ್ ಆದೇಶದಲ್ಲಿ ಮಧ್ಯ ಪ್ರವೇಶಕ್ಕೆ ಸುಪ್ರೀಂಕೋರ್ಟ್ ನಕಾರ!



ನವದೆಹಲಿ: ನಾಡಗೀತೆ 'ಜಯಭಾರತ ಜನನಿಯ ತನುಜಾತೆ'ಯ ಗಾಯನಕ್ಕೆ ನಿರ್ದಿಷ್ಟ ಧಾಟಿ ಮತ್ತು ಅವಧಿಯನ್ನು ನಿಗದಿಪಡಿಸಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ಎತ್ತಿಹಿಡಿದಿದ್ದ ಕರ್ನಾಟಕ ಹೈಕೋರ್ಟ್‌ನ ಆದೇಶದಲ್ಲಿ ಮಧ್ಯಪ್ರವೇಶಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ನಾಡಗೀತೆಗೆ ಮೈಸೂರು ಅನಂತಸ್ವಾಮಿ ಅವರ ಧಾಟಿಯನ್ನು ಅಳವಡಿಸಿಕೊಂಡು ಅದರ ಪೂರ್ಣಪಾಠ ಬಳಸಬೇಕು ಹಾಗೂ ಆಲಾಪವಿಲ್ಲದೆ, ಪುನರಾವರ್ತನೆ ಇಲ್ಲದೆ 2 ನಿಮಿಷ 30 ಸೆಕೆಂಡುಗಳ ಅವಧಿಯಲ್ಲಿ ಹಾಡಬೇಕು ಎಂಬ ರಾಜ್ಯ ಸರ್ಕಾರದ ಆದೇಶವನ್ನು ರದ್ದುಗೊಳ್ಳಿಸಲು ಹೈಕೋರ್ಟ್ ನಿರಾಕರಿಸಿದ್ದನ್ನು ಪ್ರಶ್ನಿಸಿ ಕಿಕ್ಕೇರಿ ಕೃಷ್ಣಮೂರ್ತಿ ಸುಪ್ರೀಂಕೋರ್ಟ್ ಗೆ ಮೇಲ್ಮನವಿ

2ನೇ ಪುಟಕ್ಕೆ...

## ಪೊಲೀಸರ ಸಂಕಷ್ಟ ಭತ್ಯೆ ಶೇ.50 ರಷ್ಟು ಹೆಚ್ಚಳ: ಗಗನಚುಂಬಿ ಕಟ್ಟಡಗಳ ಮೇಲೆ ಹೆಲಿಪ್ಯಾಡ್ ನಿರ್ಮಾಣ ಕಡ್ಡಾಯ; ಡಿ ಕೆ ಶಿವಕುಮಾರ್

ಬೆಂಗಳೂರು: ನಾಡಿನ ಜನರ ರಕ್ಷಣೆ ಮಾಡುವ ಪೊಲೀಸರು ಉತ್ತಮ ಬದುಕನ್ನು ನಡೆಸಬೇಕು. ಆದ ಕಾರಣ ಅವರ ಸಂಕಷ್ಟ ಭತ್ಯೆಯ ಪ್ರಮಾಣವನ್ನು ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳ ಮಾದರಿಯಲ್ಲಿ ಶೇ.50ರಷ್ಟು ಹೆಚ್ಚಳಕ್ಕೆ ಸರ್ಕಾರದ ಸಮ್ಮತಿ ಇದೆ ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ಹೇಳಿದರು. ಕರ್ನಾಟಕ ರಾಜ್ಯ ಪೊಲೀಸರಿಗಾಗಿ ಸಮಗ್ರ ಸಾಮರ್ಥ್ಯ ವೃದ್ಧಿ ತರಬೇತಿಗೆ ಸಿಎಂ ಡಿ ಕೆ ಶಿವಕುಮಾರ್ ಅವರು ಬೆಂಗಳೂರಿನ ಮಾಣಿಕ್ ಶಾ ಮೈದಾನದಲ್ಲಿ ಶುಕ್ರವಾರ ಚಾಲನೆ ನೀಡಿ ಮಾತನಾಡಿದರು. "ಪೊಲೀಸರ ಆರ್ಥಿಕ ಅಗತ್ಯಗಳಿಗೆ ಮೊದಲು ಪ್ರಾಶಸ್ತ್ಯ ನೀಡಲಾಗುವುದು. ಗೃಹ ಇಲಾಖೆಯು ಪೊಲೀಸರಿಗೆ ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸುತ್ತದೆ" ಎಂದು ಭರವಸೆ ನೀಡಿದರು.

2ನೇ ಪುಟಕ್ಕೆ...



## ಅಡಿಕೆ ಬೆಳೆಗಾರರ ಆಕ್ರೋಶ:

### ದಾವಣಗೆರೆಯಲ್ಲಿ ಎಸಿ ಕಚೇರಿ ಮುತ್ತಿಗೆ ಯತ್ನ, ರೈತರ ಹೋರಾಟ ಹತ್ತಿಕ್ಕಲು ಮುಂದಾದ ಪೊಲೀಸರು!



ದಾವಣಗೆರೆ : ಮಧ್ಯ ಕರ್ನಾಟಕ ದಾವಣಗೆರೆಯ ಅಡಿಕೆ ಬೆಳೆಗಾರರು ಹಾಗೂ ಬಿಜೆಪಿ ಕಾರ್ಯಕರ್ತರ ಆಕ್ರೋಶದ ಕಿಚ್ಚು ಜೋರಾಗಿದೆ. ಗುಟ್ಕಾ ನಿಷೇಧ ಆದೇಶ ಹಿಂಪಡೆಯಬೇಕು ಮತ್ತು ಅಪ್ಪರ್ ಭದ್ರಾ ಯೋಜನೆಗೆ ನೀರು ಬಿಡುಗ-ಡೆ ಮಾಡದಿರುವಂತೆ ಆಗ್ರಹಿಸಿ ನಡೆದ ಪಾದಯಾತ್ರೆ ರಣರಂಗವಾಗಿ ಮಾರ್ಪಟ್ಟಿದೆ. ಎಸಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಮಾಜಿ ಸಚಿವ ಎಂಪಿ ರೇಣುಕಾಚಾರ್ಯ ಸೇರಿದಂತೆ ನೂರಾರು ರೈತರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಸದ್ಯ ನಗರದಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದೆ.

2ನೇ ಪುಟಕ್ಕೆ...

## ಬಳ್ಳಾರಿ । ರಸಗೊಬ್ಬರಗಳಿಂದ ಅಂತರ್ಜಲ ಕಲುಷಿತ



ಬಳ್ಳಾರಿ: ಕೃಷಿಯಲ್ಲಿ ಮಿತಿಮೀರಿದ ರಸಗೊಬ್ಬರ ಬಳಕೆಯಿಂದಾಗಿ ಬಳ್ಳಾರಿ ಜಿಲ್ಲೆಯ ಅಂತರ್ಜಲದಲ್ಲಿ ನೈಟ್ರೇಟ್ ಮತ್ತು ಫ್ಲೋರೈಡ್ ಅಂಶ ನಿಗದಿತ ಮಿತಿ ಮೀರಿರುವುದು ಕೇಂದ್ರ ಅಂತರ್ಜಲ ಮಂಡಳಿಯ (ಸಿಜಿಡಬ್ಲ್ಯುಬಿ) ಸಮೀಕ್ಷೆಯಿಂದ ದೃಢಪಟ್ಟಿದೆ. ಕೇಂದ್ರ ರಸಗೊಬ್ಬರ ಇಲಾಖೆ ಪೂರೈಸಿರುವ ಮಾಹಿತಿಯಿಂದ ಈ ಸಂಗತಿ ಬೆಳಕಿಗೆ ಬಂದಿದೆ. ನೈಟ್ರೇಟ್ ಮತ್ತು ಫ್ಲೋರೈಡ್‌ಯುಕ್ತ ನೀರಿನ ಸೇವನೆಯು ಹಲವು ರೀತಿಯ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಹೀಗಾಗಿ ಈ ವರದಿಯು ಆತಂಕಕ್ಕೆ ಕಾರಣವಾಗಿದೆ.

**ವರದಿಯಲ್ಲೇನಿದೆ:–** ವಾರ್ಷಿಕ ಅಂತರ್ಜಲ ಗುಣಮಟ್ಟ ವರದಿ–2025ರ ಪ್ರಕಾರ, ಬಳ್ಳಾರಿ ಜಿಲ್ಲೆಯಿಂದ ಸಂಗ್ರಹಿಸಲಾದ ಒಟ್ಟು 4 ಅಂತರ್ಜಲ ಮಾದರಿಗಳ ಪೈಕಿ ಒಂದು ಮಾದರಿಯಲ್ಲಿ ನೈಟ್ರೇಟ್ ಪ್ರಮಾಣ ಬಿಐಎಸ್ (ಭಾರತೀಯ ಮಾನದಂಡ ಸಂಸ್ಥೆ) ನಿಗದಿಪಡಿಸಿದ ಗರಿಷ್ಠ ಮಿತಿ 45 ಮಿ.ಗ್ರಾಂ/ಲೀ ಮೀರಿದೆ. ಅಂದರೆ, ಒಟ್ಟಾರೆ ಸಂಗ್ರಹಿತ ಮಾದರಿಯಲ್ಲಿ ಶೇ. 25ರಷ್ಟರಲ್ಲಿ ನೈಟ್ರೇಟ್ ಕಂಡು ಬಂದಿದೆ. ಇನ್ನು ಎರಡು ಮಾದರಿಗಳಲ್ಲಿ ಫ್ಲೋರೈಡ್ ಅಂಶ ನಿಗದಿತ 1.5 ಮಿ.ಗ್ರಾಂ/ಲೀ ಮಿತಿಯನ್ನು ಮೀರಿತ್ತು. ಇದು ಒಟ್ಟಾರೆ ಸಂಗ್ರಹಿತ ಮಾದರಿಯ ಶೇ 50ರಷ್ಟು ಎಂದು ವರದಿ ಹೇಳಿದೆ. ವಿದ್ಯುತ್ ವಾಹಕತೆ (ಎಲೆಕ್ಟ್ರಿಕಲ್ ಕಂಡಕ್ಟಿವಿಟಿ) ವಿಚಾರದಲ್ಲಿ ಯಾವುದೇ ಮಾದರಿ ಮಿತಿ ಮೀರಿಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಸಾರಜನಕಯುಕ್ತ ರಸಗೊಬ್ಬರಗಳ (ವಿಶೇಷವಾಗಿ ಯೂರಿಯಾ) ಅಸಮತೋಲಿತ ಮತ್ತು ಅತಿಯಾದ ಬಳಕೆಯಿಂದ ಮಣ್ಣಿನ ಆಮ್ಲೀಯತೆ, ಸೂಕ್ಷ್ಮ ಪೋಷಕಾಂಶಗಳ ಕೊರತೆ-ಯ ಸಮಸ್ಯೆ ಉಂಟಾಗುತ್ತಿದೆ. ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್) ನಡೆಸಿದ ದೀರ್ಘಕಾಲೀನ ಅಧ್ಯಯನಗಳೂ ಹೆಚ್ಚು ರಸಗೊಬ್ಬರ ಬಳಸುವ ಪ್ರದೇಶಗಳಲ್ಲಿ ಅಂತರ್ಜಲ ನೈಟ್ರೇಟ್ ಮಟ್ಟ ಹೆಚ್ಚುತ್ತಿರುವುದನ್ನು ದೃಢಪಡಿಸಿವೆ.

## ನ್ಯಾಯಬೆಲೆ ಅಂಗಡಿಗಳ ವಿವಿಧ ಸಮಸ್ಯೆಗಳ ಇತ್ಯರ್ಥಕ್ಕೆ ಆಗ್ರಹಿಸಿ ಮುಖ್ಯಮಂತ್ರಿಗಳಿಗೆ ಮನವಿ

ದಾವಣಗೆರೆ : ನ್ಯಾಯಬೆಲೆ ಅಂಗಡಿ ಮಾಲೀಕರು ಹಾಗೂ ಸಹಕಾರ ಸಂಘಗಳ ಕಾರ್ಯದರ್ಶಿಗಳು ಎದುರಿಸುತ್ತಿರುವ ವಿವಿಧ ಸಮಸ್ಯೆಗಳನ್ನು ಶೀಘ್ರವೇ ಬಗೆಹರಿಸುವಂತೆ ಆಗ್ರಹಿಸಿ, ಹರಿಹರ ನಗರ ನ್ಯಾಯಬೆಲೆ ಅಂಗಡಿ ಮಾಲೀಕರ ಹಾಗೂ ಸಹಕಾರ ಸಂಘಗಳ ಕಾರ್ಯದರ್ಶಿಗಳ ಸಂಘದ ಪದಾಧಿಕಾರಿಗಳು ಜಿಲ್ಲಾಧಿಕಾರಿಗಳ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು. ಪಡಿತರ ವಿತರಿಸುವ ಸಮಯದಲ್ಲಿ ಸರ್ವರ್ ಸಮಸ್ಯೆ ತೀವ್ರವಾಗಿದ್ದು, 1 ಕಾರ್ಡ್ಗೆ ಸುಮಾರು 15 ರಿಂದ 20 ನಿಮಿಷ ಸಮಯ ತಗುಲುತ್ತಿರುವುದರಿಂದ ಪಡಿತರದಾರರಿಗೆ ತೊಂದರೆಯಾಗುತ್ತಿದೆ. ಇದನ್ನು ತಕ್ಷಣವೇ ಸರಿಪಡಿಸಬೇಕು ಹಾಗೂ ಈ ವರ್ಷದ ಇ-ಕೆವೈಸಿ ಪ್ರಕ್ರಿಯೆಯನ್ನು ಕರ್ನಾಟಕ-ಒನ್ ಅಥವಾ ಇತರೆ ಏಜೆನ್ಸಿಗಳಿಗೂ ವಹಿಸಿ ಪರ್ಯಾಯ ವ್ಯವಸ್ಥೆ ಮಾಡಬೇಕು ಎಂದು ಆಗ್ರಹಿಸಿದರು.



ಒಂದನೇ ಪುಟದಿಂದ..

# ಗಗನಚುಂಬಿ ಕಟ್ಟಡಗಳ ಮೇಲೆ ಹೆಲಿಪ್ಯಾಡ್ ನಿರ್ಮಾಣ ಕಡ್ಡಾಯ; ಸಿಎಂ ಡಿಕೆಶಿ

"ನಮ್ಮನ್ನು ರಕ್ಷಿಸಲು ನಮ್ಮ ಆರಕ್ಷಕರನ್ನು ಸಜ್ಜುಗೊಳಿಸುವ ಧನ್ಯವಾದಗಳು. ಸಜ್ಜನರನ್ನು ರಕ್ಷಿಸುವುದು, ದುರ್ಜನರನ್ನು ಶಿಕ್ಷಿಸುವುದೂ ಕೂಡ ಧರ್ಮ. ನೀವೆಲ್ಲರೂ ಧರ್ಮದ ಕಾರ್ಯವನ್ನು ಬಹಳ ನಿಷ್ಠೆಯಿಂದ ಮಾಡುತ್ತಿದ್ದೀರಿ. ಸಮಾಜದಲ್ಲಿ ಅಶಾಂತಿ, ಕಾನೂನು ಸುವ್ಯವಸ್ಥೆ ಹದಗೆಟ್ಟಾಗ ನೀವು ಶಿಷ್ಟರ ರಕ್ಷಣೆಗೆ ಬರುತ್ತೀರಿ.

ರಾಷ್ಟ್ರೀಯ ಭದ್ರತಾ ಪಡೆ ತಮ್ಮ ಶಕ್ತಿಯನ್ನು ನಮ್ಮ ರಾಜ್ಯ ಪೊಲೀಸರಿಗೆ ಧಾರೆ ಎರೆಯುತ್ತಿದೆ. ಎನ್ ಎಸ್‌ಜಿಯಿಂದ ಪಡೆದ ತರಬೇತಿ ಸಾರ್ಥಕವಾಗಬೇಕು. ಅದನ್ನು ನಾಡಿನ, ಜನರ ರಕ್ಷಣೆಗೆ ಬಳಸಬೇಕು. ಎನ್ ಎಸ್ ಜಿ ತರಬೇತಿ ನಮ್ಮ ಪೊಲೀಸರ ಸಾಮರ್ಥ್ಯ ಹೆಚ್ಚಿಸುತ್ತದೆ ಕೌಶಲ್ಯವಂತರನ್ನಾಗಿ ಮಾಡುತ್ತದೆ" ಎಂದರು.

ಕರ್ನಾಟಕ ಪೊಲೀಸ್ ದೇಶದ ಹೆಮ್ಮೆ. ನಮ್ಮ ಪೊಲೀಸರು ದಕ್ಷತೆಗೆ, ಕಾರ್ಯಪರತೆಗೆ, ಕರ್ತವ್ಯ ನಿಷ್ಠೆಗೆ ಹೆಸರಾದವರು. ನಾವು ಹುಟ್ಟಿದ ಈ ಸಮಾಜಕ್ಕೆ ಋಣ ತೀರಿಸುವುದೇ ನಿಜವಾದ ಸೇವೆ. ಆ ಕೆಲಸವನ್ನು ನೀವು ಬಹಳ ಚೆನ್ನಾಗಿ ಮಾಡುತ್ತಿದ್ದೀರಿ. ಕಷ್ಟದ ಸಂದರ್ಭದಲ್ಲಿ ನೀವು ನಿಮ್ಮ ಪ್ರಾಣ ಪಣಕ್ಕಿಟ್ಟು ಹೋರಾಟ ಮಾಡಿ ನಾಡನ್ನು ರಕ್ಷಣೆ ಮಾಡುತ್ತಿದ್ದೀರಿ. ನಮ್ಮ ಆರಕ್ಷಕರು, ಕಾನೂನಿನ ಪಾಲಕರು, ಕಾನೂನಿನ ರಕ್ಷಕರು" ಎಂದು ಶ್ಲಾಘಿಸಿದರು.

"ನಾನು 35 ವರ್ಷಗಳ ಹಿಂದೆ ಗೃಹ ಇಲಾಖೆಗೆ ಸಂಬಂಧಿಸಿದ ಬಂಧಿಖಾನೆ ಸಚಿವನಾಗಿದ್ದಾಗ ಸಾಕಷ್ಟು ಮಾಹಿತಿ ಪಡೆದಿದ್ದೆ. ಹಗಲು ರಾತ್ರಿ ನೀವು ಶ್ರಮಿಸುತ್ತೀರಿ. ಕೆಲವು ದುರ್ಘಟನೆ ಸಂದರ್ಭದಲ್ಲಿ ನಾವು ರಾಜಕಾರಣಿಗಳು ನಿಮ್ಮನ್ನೇ ದೂಷಿಸಿರುವ ಉದಾಹರಣೆಗಳಿವೆ. ನೀವು ನಿಮ್ಮ ನಿಷ್ಠೆ, ಪ್ರಾಮಾಣಿಕತೆಯಲ್ಲಿ ದೇಶದ ಸಮಗ್ರತೆ, ಐಕ್ಯತೆ, ಶಾಂತಿ ಕಾಪಾಡುವುದು ಮುಖ್ಯ" ಎಂದರು. "ಗಡಿಯಲ್ಲಿ ಸೈನಿಕ. ಗಡಿಯ ಒಳಗೆ ಆರಕ್ಷಕ. ನೀವಿದ್ದರೆ ಸಮಾಜ ನೆಮ್ಮದಿ, ಸುಖವಾಗಿರುತ್ತದೆ. ನೀವು ನಿಮ್ಮ ಕರ್ತವ್ಯವನ್ನು ಪ್ರೀತಿಯಿಂದ ಒಪ್ಪಿ ಈ ಇಲಾಖೆ ಸೇರಿದ್ದೀರಿ. ಕೆಲವರು ಪೊಲೀಸ್ ಕೆಲಸವನ್ನು ಹಣ ಕಾಯುವ ಕೆಲಸ ಎಂದು ಟೀಕಿಸುತ್ತಾರೆ. ಆದ-ರೆ ನೀವು ದೇಶ ಸೇವೆ ಮಾಡುತ್ತಿದ್ದೀರಿ. ನಿಮ್ಮ ಬಗ್ಗೆ ನಮಗೆ ಹೆಮ್ಮೆ ಇದೆ" ಎಂದರು. "ಸೈಬರ್ ಕ್ರೈಂಗಳು ಹೆಚ್ಚುತ್ತಿವೆ. ಇದನ್ನು ನಿಯಂತ್ರಿಸಲು ತಂತ್ರಜ್ಞಾನ ಬಳಸುತ್ತಿದ್ದೇವೆ. ದೇಶ ರಕ್ಷಣೆಗೂ ನಾವು ಡ್ರೋನ್ ಬಳಸುತ್ತಿದ್ದೇವೆ. ಬೆಂಗಳೂರು ಜಾಗತಿಕ ನಗರ. ಇಡೀ ವಿಶ್ವ ಈ ನಗರ ನೋಡುತ್ತಿದೆ. ನಮ್ಮ ಸಿಬ್ಬಂದಿ ಸಾಮರ್ಥ್ಯ ಹೆಚ್ಚಿಸಲು ನಮ್ಮ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಮುಂದಾಗಿದ್ದಾರೆ" ಎಂದರು.

"ಬೆಂಗಳೂರು ನಗರದಲ್ಲಿ ಗಗನಚುಂಬಿ ಕಟ್ಟಡಗಳು ನಿರ್ಮಾಣ ಹೆಚ್ಚಾಗುತ್ತಿವೆ. ಬೆಂಕಿ ಅನಾಹುತ, ಭಯೋತ್ಪಾದನೆ ದಾಳಿಗಳು ಸಂಭವಿಸಿದರೆ ನಾಗರಿಕ ರಕ್ಷಣೆ ನಮ್ಮ ಕರ್ತವ್ಯ. ಇಂಥ ತುರ್ತು ಸಂದರ್ಭಗಳಲ್ಲಿ ಜೀವ ಉಳಿಸಲು ಹೆಲಿಪ್ಯಾಡ್ ಗಳ ಬಳಸಿಕೊಳ್ಳುವ ವಿಚಾರವಾಗಿ ನಮ್ಮ ಸರ್ಕಾರ ಮಿಲಿಟರಿ, ವಾಯು ಸೇನಾ ಅಧಿಕಾರಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವ ಮಾತುಕತೆಯನ್ನು ಗೃಹಚಿವರು ನಡೆಸಲಿದ್ದಾರೆ" ಎಂದರು.

"ಬೆಂಗಳೂರು ವಿಶ್ವಮಾನ್ಯ ನಗರ. ನಗರದಲ್ಲಿರುವ ಗಗನ ಚುಂಬಿ ಕಟ್ಟಡಗಳ ಮೇಲೆ ಹೆಲಿಪ್ಯಾಡ್ ನಿರ್ಮಾಣಕ್ಕೆ ಅಗತ್ಯ ಸ್ಥಳವನ್ನು ಒದಗಿಸಬೇಕು. ಕಾನೂನು ಚೌಕಟ್ಟಿನಲ್ಲಿ ಅನುಮತಿಯನ್ನು ನೀಡುವ ಕೆಲಸ ನಮ್ಮ ಸರ್ಕಾರ ಮಾಡಲಿದೆ ಎಂದು ಬಿಲ್ಡರ್ ಗಳು, ಡೆವಲಪರ್ ಗಳಿಗೆ ಮನವಿ ಮಾಡುತ್ತೇನೆ" ಎಂದರು.

"ಡಿಜಿಟಲ್ ಕ್ರೈಂಗಳು ಹೆಚ್ಚುತ್ತಿವೆ. ನಾವುಗಳು ಅಪ್ ಡೇಟ್ ಆಗಬೇಕು. ರಾಜ್ಯದ ಜನಸಂಖ್ಯೆ 7 ಕೋಟಿಯಾಗಿದೆ. 2 ಲಕ್ಷ ವಿದೇಶಿಗರು ನಮ್ಮನ್ನು ನಂಬಿ ಇಲ್ಲಿದ್ದಾರೆ. ವಿಶ್ವದ ಅತ್ಯುತ್ತಮ ಕಂಪನಿಗಳು ಇಲ್ಲೇ ಕಾರ್ಯನಿರ್ವಹಿಸುತ್ತಿವೆ. ಎಲ್ಲದಕ್ಕೂ ಕಾರಣ ನಂಬಿಕೆ, ವಿಶ್ವಾಸ. ನಮ್ಮನ್ನು ನಂಬಿ ಇಲ್ಲಿಗೆ ಬಂದಿದ್ದಾರೆ. ಅವರಿಗೆ ರಕ್ಷಣೆ ನೀಡುವುದು ನಮ್ಮ ಕರ್ತವ್ಯ. ಗೃಹ ಇಲಾಖೆ, ಪೊಲೀಸ್ ಇಲಾಖೆ ಒಟ್ಟಿಗೆ ಆ ಕೆಲಸವನ್ನು ಈಗಾಗಲೇ ಸಮರ್ಥವಾಗಿ ಮಾಡುತ್ತಿದೆ" ಎಂದು ಹೇಳಿದರು.

"ಪೊಲೀಸರಿಗ ಹೆಚ್ಚಿನ ವಸತಿ ವ್ಯವಸ್ಥೆ ಹಾಗೂ ಅವರ ಮೇಲಿರುವ ಒತ್ತಡ ಕಡಿಮೆ ಮಾಡುವುದು ನಮ್ಮ ಕರ್ತವ್ಯ. ಆ ಕೆಲಸವನ್ನು ಶೀಘ್ರದಲ್ಲೇ ಮಾಡುತ್ತೇವೆ. ಬೆಂಗಳೂರು ನಗರ ಒಳಗೊಂಡಂತೆ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲೂ ರೌಡಿಗಳನ್ನು ನಿಗ್ರಹಕ್ಕೆ ಪ್ರತ್ಯೇಕ ಐಪಿಎಸ್ ಅಧಿಕಾರಿಗಳ ನೇತೃತ್ವದಲ್ಲಿ ರೌಡಿ ನಿಗ್ರಹ ಪಡೆ ರಚಿಸುವ ಕಾರ್ಯಕ್ಕೆ ಈಗಾಗಲೇ ಚಾಲನೆ ನೀಡಿದ್ದೇವೆ. ಈ ತಂಡ ಯಾವ ರಾಜಕೀಯ ಒತ್ತಡಕ್ಕೂ ಮಣಿಯದೇ ಜನರಿಗೆ ಭದ್ರತೆ, ಸಮಾಜದಲ್ಲಿ ಸ್ವಾಸ್ಥ್ಯ ಕಾಪಾಡುವ ಕೆಲಸ ಮಾಡಲಿದೆ" ಎಂದರು. "ಕರ್ನಾಟಕದ ಪೊಲೀಸರು ದೇಶದ ಕೀರ್ತಿಯನ್ನು ಹೆಚ್ಚಿಸುವಂತಾಗಲಿ. ಕರ್ನಾಟಕ ಬಲಗೊಂಡ-ರೆ ದೇಶ ಬಲಗೊಂಡಂತೆ. ವಿದೇಶದಿಂದ ಭಾರತಕ್ಕೆ ಬರುವವರು ಮೊದಲು ಕರ್ನಾಟಕಕ್ಕೆ ಕಾಲಿಡುತ್ತಾರೆ. ವಿಶ್ವ ಕರ್ನಾಟಕದ ಕಡೆ ನೋಡುತ್ತಿದೆ. ಹಾಗಾಗಿ ಪೊಲೀಸರ ಮೇಲೆ ಹೆಚ್ಚಿನ ಜವಾಬ್ದಾರಿಯಿದೆ" ಎಂದರು.

# ನಾಡಗೀತೆ: ಹೈಕೋರ್ಟ್ ಆದೇಶದಲ್ಲಿ ಮಧ್ಯ ಪ್ರವೇಶಕ್ಕೆ ಸುಪ್ರೀಂಕೋರ್ಟ್ ನಕಾರ!

ಸಲ್ಲಿಸಿದ್ದರು.

ಈ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಆರ್. ಮಹಾದೇವನ್ ಅವರಿದ್ದ ಪೀಠವು ವಜಾಗೊಳಿಸಿತು. ನಾಡಗೀತೆ-ಯ ಧಾಟಿ ಮತ್ತು ಹಾಡಿನ ಅವಧಿ ಎರಡರಲ್ಲೂ ಏಕರೂಪತೆ ಅಗತ್ಯ ಎಂದು ಪೀಠವು ಅಭಿಪ್ರಾಯಪಟ್ಟಿತು. ಇಂತಹ ಸನ್ನಿವೇಶದಲ್ಲಿ ಹೈಕೋರ್ಟ್ ಆದೇಶದಲ್ಲಿ ಹಸ್ತಕ್ಷೇಪ ಮಾಡಲು ನಮಗೆ ಯಾವುದೇ ಕಾರಣ ಸಿಗುತ್ತಿಲ್ಲ ಎಂದು ನ್ಯಾಯಪೀಠ ಹೇಳಿತು.ಕೃಷ್ಣಮೂರ್ತಿ ಪರವಾಗಿ ಹಿರಿಯ ವಕೀಲ ಮೋಹನ್ ವಿ. ಕತಾರ್ಕಿ ವಾದ ಮಂಡಿಸಿದರು. ತಜ್ಞ-ರಿಂದ ಸಂಯೋಜಿಸಲ್ಪಟ್ಟಿರುವ ನಾಡಗೀತೆಗೆ ಧಾಟಿಯನ್ನು ನಿಗದಿಪಡಿಸುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆ ಎಂದು ಹೈಕೋರ್ಟ್ ತನ್ನ ತೀರ್ಪಿನಲ್ಲಿ ಪ್ರತಿಪಾದಿಸಿತ್ತು. ಅಲ್ಲದೆ, ಸರ್ಕಾರದ ನಿರ್ಧಾರ ಅರ್ಜಿದಾರರ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಎಂಬ ವಾದವನ್ನೂ ಅದು ತಿರಸ್ಕರಿಸಿತ್ತು. ಈ ಹಿಂದೆ ನಾಡಗೀತೆಯನ್ನು ಯಾವ ರಾಗದಲ್ಲಿ ಹಾಡಬೇಕು ಎಂಬುದನ್ನು ರಾಜ್ಯ ಸರ್ಕಾರ ನಿರ್ಧರಿಸಲು ಸಾಧ್ಯವಿಲ್ಲ ಎಂಬ ಕೃಷ್ಣಮೂರ್ತಿ ಅವರ ವಾದವನ್ನು ಹೈಕೋರ್ಟ್ ತಿರಸ್ಕರಿಸಿತ್ತು. ಆ ವಾದವು ಸಮರ್ಥನೀಯವಲ್ಲ ಎಂದು ಹೇಳಿತ್ತು.

# ಅಡಿಕೆ ಬೆಳೆಗಾರರ ಆಕ್ರೋಶ: ಹೋರಾಟ ಹತ್ತಿಕ್ಕಲು ಮುಂದಾದ ಪೊಲೀಸರು!

ಕಳೆದ ಮೂರು ದಿನಗಳಿಂದ ಜಿಲ್ಲೆಯ ವಿವಿಧ ಭಾಗಗಳಿಂದ ಆರಂಭವಾಗಿದ್ದ ಪಾದಯಾತ್ರೆ ಶುಕ್ರವಾರ ನಗರವನ್ನು ಪ್ರವೇಶಿಸಿತು. ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ರೈತ ಮುಖಂಡ ಮಾಡಾಳ್ ಮಲ್ಲಿಕಾರ್ಜುನ್ ಹಾಗೂ ಲೋಕಿಕೆರೆ ನಾಗರಾಜ್ ನೇತೃತ್ವದಲ್ಲಿ ಸಾವಿರಾರು ರೈತರು ನಗರದ ಜಯದೇವ ವೃತ್ತದಿಂದ ಎಸಿ ಕಚೇರಿಯತ್ತ ಧಾವಿಸಿದರು. 'ತಿಂಗಳುಗಟ್ಟಲೆ ರೈತರು ಹೋರಾಟ ನಡೆಸಿದರೂ ಕ್ಯಾರೆ ಎನ್ನದ ಸರ್ಕಾರ, ಚುನಾವಣೆ ರಾಜಕೀಯಕ್ಕಾಗಿ ಅಪ್ಪರ್ ಭದ್ರಾಗೆ 3 ಟಿಎಂಸಿ ನೀರು ಬಿಡಲು ಹೊರಟಿದೆ. ಇತ್ತ ಗುಟ್ಕಾ ನಿಷೇಧದಿಂದಾಗಿ ಅಡಿಕೆಗೆ ಬೆಲೆಯಿಲ್ಲದೆ ಬೆಳೆಗಾರರು ಕಂಗಾಲಾಗಿದ್ದಾರೆ' ಎಂದು ರೈತ ಮುಖಂಡ ಮಾಡಾಳ್ ಮಲ್ಲಿಕಾರ್ಜುನ್ ಆಕ್ರೋಶ ಹೊರಹಾಕಿದರು.

**ಟೈಯರ್‌ಗೆ ಬೆಂಕಿ, ಬ್ಯಾರಿಕೇಡ್ ಧ್ವಂಸ: ಬಿಗುವಿನ ವಾತಾವರಣ**

ಇನ್ನು ಪ್ರತಿಭಟನಾ ಮೆರವಣಿಗೆ ಪಿಬಿ ರಸ್ತೆಗೆ ತಲುಪುತ್ತಿದ್ದಂತೆ ರಸ್ತೆ ತಡೆ ನಡೆಸಿದ ಪ್ರತಿಭಟನಾಕಾರರು ಟೈಯರ್‌ಗಳಿಗೆ ಬೆಂಕಿ ಹಚ್ಚಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಇದರಿಂದ ಕೆಲಕಾಲ ವಾಹನ ಸಂಚಾರ ಸಂಪೂರ್ಣ ಅಸ್ತವ್ಯಸ್ತಗೊಂಡಿತು. ಬಳಿಕ ಎಸಿ ಕಚೇರಿ ಆವರಣಕ್ಕೆ ನುಗ್ಗಲು ಯತ್ನಿಸಿದಾಗ ಪೊಲೀಸರು ಅಳವಡಿಸಿದ್ದ ಬ್ಯಾರಿಕೇಡ್‌ಗಳನ್ನು ದೂಡಿ ಒಳನುಗ್ಗಲು ಮುಂದಾದರು. ಈ ವೇಳೆ ಪೊಲೀಸರು ಮತ್ತು ರೈತರ ನಡುವೆ ತೀವ್ರ ತಳ್ಳಾಟ-ನೂಕಾಟ, ಮಾತಿನ ಚಕಮಕಿ ನಡೆದು ವಾತಾವರಣ ಉದ್ವಿಗ್ನಗೊಂಡಿತು. ಪರಿಸ್ಥಿತಿ ಕೈಮೀರುತ್ತಿದ್ದಂತೆ ಕಾರ್ಯಪ್ರವೃತ್ತರಾದ ಪೊಲೀಸರು ಮುಖಂಡರಾದ ರೇಣುಕಾಚಾರ್ಯ, ಮಾಡಾಳ್ ಮಲ್ಲಿಕಾರ್ಜುನ್ ಸೇರಿದಂತೆ 200ಕ್ಕೂ ಹೆಚ್ಚು ಮಂದಿಯನ್ನು ವಶಕ್ಕೆ ಪಡೆದರು. ಪೊಲೀಸ್ ಬಲದಿಂದ ರೈತರ ನ್ಯಾಯಯುತ ಧ್ವನಿಯನ್ನು ಅಡಗಿಸಲು ಸಾಧ್ಯವಿಲ್ಲ ಎಂದು ಗುಡುಗಿರುವ ನಾಯಕರು, ಸರ್ಕಾರ ಕೂಡಲೇ ಅಪ್ಪರ್ ಭದ್ರಾಗೆ ನೀರು ಬಿಡುವ ನಿರ್ಧಾರ ಹಾಗೂ ಗುಟ್ಕಾ ನಿಷೇಧ ಆದೇಶವನ್ನು ವಾಪಸ್ ಪಡೆಯಬೇಕು, ಇಲ್ಲದಿದ್ದರೆ ಬರುವ ಸೋಮವಾರ 'ದಾವಣಗೆರೆ ಬಂದ್' ಮಾಡಲಾಗುವುದು ಎಂದು ಖಡಕ್ ಎಚ್ಚರಿಕೆ ನೀಡಿದ್ದಾರೆ.

# ಪ್ಲಾಸ್ಟಿಕ್ ಬಳಸದೆ ಮಾದರಿಯಾದ ದಾಸೋಹ..



ಗುಂಡ್ಲುಪೇಟೆ : ಮೂಡುಗೂರಿನ ಉದ್ದಾನೇಶ್ವರ ವಿರಕ್ತಮಠ ಆಯೋಜಿಸಿದ್ದ; ಚಿನ್ಮಯಜ್ಞಾನಿ ಚೆನ್ನಬಸವಣ್ಣನವರ ದಾಸೋಹಭವನದ ಲೋಕಾರ್ಪಣೆ ಕಾರ್ಯಕ್ರಮ, ಯಶಸ್ವಿಯಾಗಿ ಮುಗಿಯಿತು.ಅದರ ನಿಮಿತ್ತವಾಗಿ ಶ್ರೀಮಠದ ಪೂಜ್ಯ ಶ್ರೀ ಇಮ್ಮಡಿ ಉದ್ದಾನಸ್ವಾಮಿಗಳು ಬಂದ ಭಕ್ತಗಣದ ಸಂತೃಪ್ತಿಗಾಗಿ ಆಯೋಜಿಸಿದ್ದ ಅನ್ನ ದಾಸೋಹ ಭಿನ್ನವಾಗಿ ಜನಮನವನ್ನು ಸೆಳೆಯಿತು.


ಇಂದು ಯಾವುದೇ ಕಾರ್ಯಕ್ರಮ ಮಾಡಲಿ, ಮದುವೆ,ಒಪ್ಪಂದ,ನಾಮಕರಣ,ದೇವಸ್ಥಾನದ, ಮಠಗಳ ಭಕ್ತಿಯ ದಾಸೋಹಗಳಲ್ಲೂ ಕಾಣಬರುವುದು,ಪ್ಲಾಸ್ಟಿಕ್ ಹಾವಳಿ, ಕುಡಿಯುವ ನೀರಿಗಾಗಿ ಅರ್ಧ ಲೀಟರ್ ನೀರಿನ ಬಾಟಲಿ ಕೊಡುವುದು, ಪ್ಲಾಸ್ಟಿಕ್ ಬಾಳೆಎಲೆ ಬಳಸುವುದು,ಇಂತಹದ್ದೆ ಕಂಡುಬರುತ್ತಿರುವಾಗ , ಇಲ್ಲಿ ಗುಂಡ್ಲುಪೇಟೆ ತಾಲೂಕಿನ ಉದ್ದಾನೇಶ್ವರ ವಿರಕ್ತಮಠ ಭಿನ್ನದಾರಿ ತುಳಿದು ಗಮನ ಸೆಳೆದಿದೆ.

25 ರ ರಾತ್ರಿಯಿಂದ 26 ರ ಸಂಜೆಯವರೆವಿಗೆ ಸುಮಾರು ಐವತ್ತು ಸಾವಿರಕ್ಕೂ ಹೆಚ್ಚು ಭಕ್ತರು ಪ್ರಸಾದ ಸ್ವೀಕರಿಸಿ ತೃಪ್ತರಾದರು. ಇದೊಂದು ವಿಶಿಷ್ಟವಾದ ದಾಸೋಹ ಎನಿಸಿಕೊಂಡು ಇತಿಹಾಸದ ಪುಟ ಸೇರಿತು. ಹತ್ತಾರು ಗ್ರಾಮಗಳ ಯುವಕರು, ಅನುಭವಿ ಹಿರಿಯರು ಸಮ್ಮಿಲನಗೊಂಡು ಬಂದವರನ್ನೆಲ್ಲಾ ಸಂತೈಸುವಿಕೆಯಲ್ಲಿ ಸಂಭ್ರಮಿಸಿದರು. ಅದರದೊಂದು ಸಣ್ಣ ಪರಿಚಯ ಮಾಡಿಕೊಳ್ಳೋಣ.

ಪರಿಸರದ ಕಾಳಜಿಯನ್ನು ಹೃದಯದಲ್ಲಿ ಬಿತ್ತಿ-ಕೊಂಡ ಸಂತ ಎನಿಸಿಕೊಂಡ ಶ್ರೀಗಳು; ಭೂಮಿಗೆ ಪ್ಲಾಸ್ಟಿಕ್ ಸೇರಬಾರದೆಂಬ ಕಾರಣಕ್ಕಾಗಿ, ವಾಟರ್ ಬಾಟೆಲ್ ಗಳನ್ನು ಸರಬರಾಜು ಮಾಡಲು, ಪ್ಲಾಸ್ಟಿಕ್ ಕೋಟೆಡ್ ಎಲೆಗಳನ್ನು ನೀಡ ಬಂದವರಿಗೆ ಮನವರಿಕೆ ಮಾಡಿಕೊಟ್ಟು, ಬಾಳೆಎಲೆ ಹಾಗೂ ಪೇಪರ್ ಲೋಟಗಳನ್ನು ಬಳಸಿದರು. ಪರಿಣಾಮ ಉಳಿದಕಡೆ ಕಂಡು ಬರುವಂತೆ ಎಲ್ಲೆಂದರಲ್ಲಿ ನೀರಿನ ಬಾಟೆಲುಗಳನ್ನು ಎಸೆಯುವಂತಹ ದೃಶ್ಯ ಇಲ್ಲಿರಲಿಲ್ಲ. ಬದಲಿಗೆ ಉಂಡ ಎಲೆಗಳನ್ನು- ನೀರು ಕುಡಿದ ಲೋಹಗಳನ್ನು ಅಲ್ಲಲ್ಲಿ ನಿಲ್ಲಿಸಿದ್ದ ಟ್ರಾಕ್ಟರ್ ಟ್ರಾಲಿಗಳಲ್ಲಿಯೇ ಹಾಕುತ್ತಿದ್ದರು. ಕೈ ತೊಳೆಯಲು ಮಾಡಿದ್ದ ವ್ಯವಸ್ಥೆ ಜನ ಮೆಚ್ಚುವಂತಿತ್ತು. ಹತ್ತಾರು ಸಾವಿರ ಜನ ಬಳಸಿದ ನೀರು ಸರಾಗವಾಗಿ ಹರಿದುಹೋಗುತ್ತಿತ್ತು.

ಹಿಂದಿನ ದಿನ 25 ರಂದು ಶ್ಯಾನಾಡ್ರಹಳ್ಳಿ, ಬಲಚವಾಡಿ,ಮಲ್ಲಮ್ಮನ ಹುಂಡಿ, ಪರಮಾಪುರ,ಕೆಲಸೂರುಪುರ ಹಾಗೂ 26 ರಂದು ನಡೆದ ಮಹಾ ದಾಸೋಹವನ್ನು ಹೂರದಹಳ್ಳಿ, ತಮ್ಮಡಹಳ್ಳಿ,ಕುಮುಚಹಳ್ಳಿ,ಬಾಚಹಳ್ಳಿ " ಬಡಿಸುವ ಕಾಯಕ " ಮಾಡಿದರೆ, ಬೆಟ್ಟದಪುರ ಹುಳಿಯನ್ನು-ಅಡುಗೆಯನ್ನು ಮಾಡಿದರೆ 20 ಕ್ವಿಂಟಾಲ್ ಅಕ್ಕಿಯನ್ನು ಹೀರಿಬೇಗೂರಿನವರು ಬಸಿದು ಅನ್ನವಾಗಿಸಿದರು.

ಎರಡು ದಿನದಿಂದ ಹತ್ತಿರತ್ತಿರ 40 ಕ್ವಿಂಟಾಲ್ ಆಹಾರದ ದಾಸೋಹ ನಡೆದು ಇತಿಹಾಸದಲ್ಲಿ ದಾಖಲಾಯಿತು. ಈ ಗ್ರಾಮದ ಜನತೆ ಆತ್ಮೀಯವಾಗಿ ಅಕ್ಕರೆಯಿಂದ ಬಂದವರಿಗೆಲ್ಲಾ ಬಡಿಸಿ ಸಂತೈಸಲು ಯಶಸ್ವಿಯಾದರು. ಇಷ್ಟೆಲ್ಲಾ ನಡೆದರೂ ಭೋಜನ ಮಾಡಿದ ಮಂಟಪ ಸದವಚ್ಛವಾಗಿಯೇ ಇರುವಂತೆ ಜನತೆಯೂ ನೋಡಿಕೊಂಡಿತು. 50 ಸಾವಿರ ಪ್ಲಾಸ್ಟಿಕ್ ವಾಟರ್ ಬಾಟಲ್ ರೈತನ ಕೃಷಿ ಭೂಮಿ ಸೇರದಂತೆ ಮಾಡುವಲ್ಲಿ ಯಶಸ್ವಿಯಾಯಿತು. ಪ್ರತಿಯೊಬ್ಬ ಭಕ್ತರು ಎಲೆಯಲ್ಲಿ ಅನ್ನದ ಹಗುಳನ್ನಾಗಲಿ,ತರಕಾರಿಯ ಹೋಳುಗಳನ್ನಾಗಲಿ ಬಿಡದೆ ಭೋಜನ ಮಾಡಿ ಖಾಲಿ ಎಲೆಗಳನ್ನು ಮಾತ್ರ ಟ್ರಾಕ್ಟರ್ ಟ್ರಾಲಿಗಳಿಗೆ ಹಾಕಿದರೆಂದರೆ; ಊಟ ಅಮೃತ ಸಮಾನವಾಗಿತ್ತು ಎನ್ನಲು ಮತ್ತಾವ ಸರ್ಟಿಫಿಕೇಟ್ ಬೇಕಿಲ್ಲ.ಅಲ್ಲವೆ !!



**ಅನ್ನವೆಂಬುದೇ ದೇವರು , ಅದರ ಅಪಮೌಲ್ಯ ಮಾಡಬಾರದು. ಅದನ್ನು ತಯಾರಿಸುವವರು, ಬಡಿಸುವವರು ಅರಿತರೆ, ಇಂತಹ ದಾಸೋಹ ಸಾಧ್ಯವಾಗುತ್ತದೆ.**

**ಪೂಜ್ಯ ಶ್ರೀ ಶಿವಲಿಂಗೇಂದ್ರ ಸ್ವಾಮಿಗಳು. ಶ್ರೀ ಅಡವಿಮಠ. ಪಡಗೂರು**

ಇಮ್ಮಡಿ ಉದ್ದಾನಸ್ವಾಮಿಗಳನ್ನು ಪ್ರೀತಿಸುವ, ಆರಾಧಿಸುವ, ಪೂಜಿಸುವ ಭಕ್ತರ ಸನ್ನಡತೆ ಅನುಕರಣೀಯ. ಅವರ ಬಯಕೆಯನ್ನು ಆಚರಣೆಗೆ ತಂದ ಭಕ್ತಗಣ, ಶರಣರ ದಾಸೋಹ ಕಲ್ಪನೆಯನ್ನು ಇಂದಿಗೂ ಸಾಕಾರಗೊಳಿಸುವ ಗ್ರಾಮೀಣ ವ್ಯವಸ್ಥೆ ಕಂಡು ಮನ ತುಂಬಿ, ಹಿಂದಿರುಗುತ್ತಿದ್ದ ಶರಣ ಶರಣೆಯರ ಮಾತುಗಳಲ್ಲೆಲ್ಲಾ ಉದ್ದಾನಸ್ವಾಮಿಗಳ ಗುಣಗಾನವನ್ನೆ ಕೇಳಿ ಬರುತ್ತಿತ್ತು.

## ಡಾ. ಎಸ್. ರಾಧಾಕೃಷ್ಣನ್ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿಗೆ ಆಯ್ಕೆ



ಶಿಕ್ಷಣ, ದೈಹಿಕ ಶಿಕ್ಷಣ, ಯೋಗ ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಎರಡು ದಶಕಗಳಿಗೂ ಹೆಚ್ಚು ಕಾಲ ಸಲ್ಲಿಸಿರುವ ಗಮನಾರ್ಹ ಸೇವೆ, ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆಗೆ ನೀಡಿರುವ ಕೊಡುಗೆ ಹಾಗೂ ಕ್ರೀಡಾ ಪ್ರತಿಭೆಗಳನ್ನು ರೂಪಿಸುವಲ್ಲಿ ವಹಿಸಿರುವ ಪ್ರಮುಖ ಪಾತ್ರವನ್ನು ಪರಿಗಣಿಸಿ, ಶಾಲಿನಿ ಎಸ್. ಅವರನ್ನು ಡಾ. ಎಸ್. ರಾಧಾಕೃಷ್ಣನ್ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಜನತಾಪ್ರಭ ದಿನಪತ್ರಿಕೆ ಹಾಗೂ ಆರ್ಯಭಟ ಎಜುಕೇಶನಲ್ ಟ್ರಸ್ಟ್ ಇವರ ವತಿಯಿಂದ ಆಯೋಜಿಸಲಾಗುತ್ತಿರುವ ಅಖಿಲ ಭಾರತ ಶೈಕ್ಷಣಿಕ ಸಮಾವೇಶ ಮತ್ತು ವಿವಿಧ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ, ಶಾಲಿನಿ ಎಸ್. ಅವರಿಗೆ ಅವರ ಶೈಕ್ಷಣಿಕ ಹಾಗೂ ಕ್ರೀಡಾ ಸೇವೆಯನ್ನು ಗುರುತಿಸಿ ಡಾ. ಎಸ್. ರಾಧಾಕೃಷ್ಣನ್ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ವಿದ್ಯಾರ್ಥಿಗಳ ದೈಹಿಕ, ಮಾನಸಿಕ ಮತ್ತು ಶೈಕ್ಷಣಿಕ ಬೆಳವಣಿಗೆಗೆ ನಿರಂತರವಾಗಿ ಶ್ರಮಿಸಿರುವ ಅವರು, ಯೋಗ, ಅಥ್ಲೆಟಿಕ್ಸ್ ಹಾಗೂ ಬ್ಯಾಡ್ಮಿಂಟನ್ ಕ್ಷೇತ್ರಗಳಲ್ಲಿಯೂ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಅವರ ಸೇವೆ ಮತ್ತು ಸಾಧನೆಗಳು ಶಿಕ್ಷಕ ವೃತ್ತಿಯ ಗೌರವವನ್ನು ಮತ್ತಷ್ಟು ಹೆಚ್ಚಿಸುವಂತಿವೆ.

## ಜನಪದ ಸಾಹಿತ್ಯ ಜೀವಂತ: ಯುಗಧರ್ಮ ರಾಮಣ್ಣ



ಕೂಡ್ಲಿಗಿ : ಜನಪದ ಸಾಹಿತ್ಯವು ನಮ್ಮ ನಾಡಿನ ಸಂಸ್ಕೃತಿ, ಪರಂಪರೆ, ಜೀವನಶೈಲಿ ಹಾಗೂ ಜನರ ಭಾವನೆಗಳನ್ನು ಪ್ರತಿಬಿಂಬಿಸುವ ಅಮೂಲ್ಯ ಸಂಪತ್ತಾಗಿದೆ. ಆಧುನಿಕತೆಯ ಪ್ರಭಾವ ಹೆಚ್ಚಾದರೂ ಜನಪದ ಸಾಹಿತ್ಯ ಇಂದಿಗೂ ಜನಮಾನಸದಲ್ಲಿ ಜೀವಂತವಾಗಿದೆ ಎಂದು ಯುಗಧರ್ಮ ರಾಮಣ್ಣ ಹೇಳಿದರು.

ಕಾನಾ ಮಡಗು ಶರಣಬಸವೇಶ್ವರ ದಾಸೋಹ ಮಠದ ಆವರಣದಲ್ಲಿ ಆಯೋಜಿಸಿದ್ದ ದಾಸೋಹ ಪೌರ್ಣಿಮೆ ಕಾರ್ಯಕ್ರಮದಲ್ಲಿ ಮಾತನಾಡಿ,ಹಿರಿಯರು ಹಾಡಿದ ಜನಪದ ಗೀತೆಗಳು, ಕಥೆಗಳು, ಗಾದೆಗಳು ಹಾಗೂ ನುಡಿಗಟ್ಟುಗಳಲ್ಲಿ ಬದುಕಿನ ಅನುಭವ ಮತ್ತು ಜೀವನ ಮೌಲ್ಯಗಳು ಅಡಗಿವೆ. ಇವುಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದರು.

ಜನಪದ ಕಲೆ ಮತ್ತು ಸಾಹಿತ್ಯಕ್ಕೆ ಪ್ರೋತ್ಸಾಹ ನೀಡುವುದರಿಂದ ಗ್ರಾಮೀಣ ಸಂಸ್ಕೃತಿ ಹಾಗೂ ನಮ್ಮ ಮೂಲ ಪರಂಪರೆಯನ್ನು ಉಳಿಸಿಕೊಳ್ಳಲು ಸಾಧ್ಯ. ಯುವಜನರು ಜನಪದ ಸಾಹಿತ್ಯದತ್ತ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಈ ಕಾರ್ಯಕ್ರಮ ಶರಣ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ರವಿಕುಮಾರ್ ಪ್ರಸ್ತಾವಿಕವಾಗಿ ಮಾತನಾಡಿದರು ದಾಸೋಹ ಪೌರ್ಣಿಮೆ ಕಾರ್ಯಕ್ರಮವನ್ನು ಷ.ಬ್ರ. ಯೋಗಿರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳ ಕಾರ್ಯಕ್ರಮಕ್ಕೆ ಸಾನಿಧ್ಯ ವಹಿಸಿದ್ದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ದಾ.ಮ ಐಮಡಿ ಶರಣಾರ್ಯರು ಧರ್ಮಾಧಿಕಾರಿಗಳುವಹಿಸಿಕೊಂಡಿದ್ದರು.

ಹಗರಿಬೊಮ್ಮನಹಳ್ಳಿ ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಎಂಪಿಎಂ ಮಂಜುನಾಥ್, ಚನ್ನಪ್ಪ ಕಾನಾಮಡುಗು, ಇದೇ ಸಂದರ್ಭದಲ್ಲಿ ನೀರಗಂಟಿ ಶರಣಪ್ಪ, ಚನ್ನವೀರ ಸ್ವಾಮಿ, ಗುರುಮೂರ್ತಿ, ಕೆ ಸುಭಾಷ್ ಚಂದ್ರ, ಆಲೂರು ಮಲ್ಲಿಕಾರ್ಜುನ, ಸುರೇಶ್, ಸೋಮಶೇಖರಪ್ಪ, ತಿಪ್ಪೇಸ್ವಾಮಿ,ಪಟೇಲ್, ವಸಂತ ಸಜ್ಜನ್, ಬೊಮ್ಮಣ್ಣ, ಕೆ ಕೆ ಕರಿಬಸಪ್ಪ, ರಂಗನಾಥಹಳ್ಳಿ ಶರಣಪ್ಪ, ಶ್ಯಾಮ್ ಸುಂದರ ಸಾಪರೇ,ಗಂಗಪ್ಪ ಸೇರಿದಂತೆ, ಶರಣ ಸಾಹಿತ್ಯಾಸಕ್ತರು, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ಶರಣೀಶ ಸ್ವಾಗತಿಸಿದರು. ದಿವಾಕರ್ ನಾರಾಯಣ ಕಾರ್ಯಕ್ರಮದ ನಿರೂಪಿಸಿದರು.

# ಡಾ. ಎಸ್. ರಾಧಾಕೃಷ್ಣನ್ ಅತ್ಯುತ್ತಮ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿ ಹಾಗೂ ವಿವಿಧ ಕ್ಷೇತ್ರಗಳ ಸಾಧಕರಿಗೆ ಆರ್ಯಭಟ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭ

ಬೆಂಗಳೂರು: ಶಿಕ್ಷಣ, ಸಮಾಜಸೇವೆ, ನವೋದ್ಯಮ, ಕಲೆ, ಸಂಸ್ಕೃತಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ನಿರಂತರವಾಗಿ ಗಣನೀಯ ಸೇವೆ ಸಲ್ಲಿಸುತ್ತಿರುವ ಸಾಧಕರನ್ನು ಗುರುತಿಸಿ ಗೌರವಿಸುವ ಉದ್ದೇಶದಿಂದ 'ಆರ್ಯಭಟ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭ'ವನ್ನು ಸೆ.6ರಂದು ಬೆಂಗಳೂರಿನಲ್ಲಿ ಆಯೋಜಿಸಲಾಗಿದೆ.

ಆರ್ಯಭಟ ಎಜುಕೇಷನಲ್ ಟ್ರಸ್ಟ್, ಕರ್ನಾಟಕ ಹಾಗೂ ಜನತಾಪ್ರಭ ದಿನಪತ್ರಿಕೆ ಇವರ ಸಂಯುಕ್ತ ಆಶ್ರಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಮಹಾದೇವಿ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ. ಇದೇ ಸಂದರ್ಭದಲ್ಲಿ ಅಖಿಲ ಭಾರತ ಶಿಕ್ಷಕರ ಸಮ್ಮೇಳನ ಆಯೋಜಿಸಲಾಗಿದ್ದು, ದೇಶದ ವಿವಿಧ ಭಾಗಗಳಿಂದ ಶಿಕ್ಷಕರು, ಶಿಕ್ಷಣ ತಜ್ಞರು ಹಾಗೂ ವಿವಿಧ ಕ್ಷೇತ್ರಗಳ ಸಾಧಕರು ಭಾಗವಹಿಸುವ ನಿರೀಕ್ಷೆಯಿದೆ.

**ಶಿಕ್ಷಕರ ಸೇವೆಗೆ ರಾಷ್ಟ್ರೀಯ ಗೌರವ**

ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿರುವ ಡಾ. ಎಸ್. ರಾಧಾಕೃಷ್ಣನ್ ಅತ್ಯುತ್ತಮ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿಯನ್ನು ಶಿಕ್ಷಣ ಕ್ಷೇತ್ರದಲ್ಲಿ ನಿಷ್ಠೆ, ಬೋಧನಾ ಶ್ರೇಷ್ಠತೆ ಹಾಗೂ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ವಿಶೇಷ ಕೊಡುಗೆ ನೀಡಿರುವ ಶಿಕ್ಷಕರಿಗೆ ಪ್ರದಾನ ಮಾಡಲಾಗುವುದು.

ಕನಿಷ್ಠ 10 ವರ್ಷಗಳ ಸೇವಾ ಅನುಭವ ಹೊಂದಿರುವ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿರುವ ಶಿಕ್ಷಕರನ್ನು ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ. ಶಿಕ್ಷಕರ ವೃತ್ತಿಪರ ಸೇವೆಯ ಜೊತೆಗೆ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ, ಸಮಾಜಮುಖಿ ಚಟುವಟಿಕೆಗಳು ಹಾಗೂ ಶಿಕ್ಷಣ ಕ್ಷೇತ್ರಕ್ಕೆ ನೀಡಿರುವ ಒಟ್ಟಾರೆ ಕೊಡುಗೆಯನ್ನೂ ಪರಿಗಣಿಸಲಾಗುವುದು.

**ಬಹು ಕ್ಷೇತ್ರಗಳ ಸಾಧಕರಿಗೆ ಆರ್ಯಭಟ ಪ್ರಶಸ್ತಿ**

ಶಿಕ್ಷಣದ ಜತೆಗೆ ಸಮಾಜಸೇವೆ, ನವೋದ್ಯಮ, ಕಲೆ ಮತ್ತು ಸಂಸ್ಕೃತಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಮಾಡಿರುವ ವ್ಯಕ್ತಿಗಳಿಗೆ ಆರ್ಯಭಟ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ.

ಸಾಧಕರ ಸೇವಾ ಅನುಭವ, ಕ್ಷೇತ್ರದಲ್ಲಿನ ಸಾಧನೆ, ನಿರಂತರ ಕೊಡುಗೆ ಹಾಗೂ ಸಮಾಜದ ಮೇಲೆ ಬೀರಿರುವ ಪರಿಣಾಮವನ್ನು ಪ್ರಶಸ್ತಿ ಆಯ್ಕೆಯಲ್ಲಿ ಪರಿಗಣಿಸಲಾಗುವುದು. ಅಗತ್ಯವಿರುವ ಸಂದರ್ಭದಲ್ಲಿ ಅಭ್ಯರ್ಥಿಗಳ ಸಾಧನೆಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸುವ ವ್ಯವಸ್ಥೆಯನ್ನೂ ಆಯೋಜಕರು ಕೈಗೊಂಡಿದ್ದಾರೆ.

**ಶಿಕ್ಷಕರಿಗೆ ಸಂವಾದದ ವೇದಿಕೆ :**

ಅಖಿಲ ಭಾರತ ಶಿಕ್ಷಕರ ಸಮ್ಮೇಳನದ ಮೂಲಕ ದೇಶದ ವಿವಿಧ ಭಾಗಗಳ ಶಿಕ್ಷಕರು ಮತ್ತು ಶಿಕ್ಷಣ ತಜ್ಞರು ಒಂದೇ ವೇದಿಕೆಯಲ್ಲಿ ಸೇರಲಿದ್ದಾರೆ. ಬೋಧನಾ ಅನುಭವ, ಶಿಕ್ಷಣ ಕ್ಷೇತ್ರದಲ್ಲಿನ ಬದಲಾವಣೆಗಳು ಹಾಗೂ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರದ ಕುರಿತು ವಿಚಾರ ವಿನಿಮಯಕ್ಕೆ ಅವಕಾಶ ಕಲ್ಪಿಸುವ ಉದ್ದೇಶ ಹೊಂದಲಾಗಿದೆ.

ಶಿಕ್ಷಣ ಕ್ಷೇತ್ರದ ಅನುಭವಗಳನ್ನು ಪರಸ್ಪರ ಹಂಚಿಕೊಳ್ಳುವುದರ ಜೊತೆಗೆ, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವವರನ್ನು ಶಿಕ್ಷಕರು ಹಾಗೂ ಯುವಜನತೆಗೆ ಪರಿಚಯಿಸುವ ಮೂಲಕ ಪ್ರೇರಣೆಯ ವಾತಾವರಣ ನಿರ್ಮಿಸುವ ಆಶಯವೂ ಕಾರ್ಯಕ್ರಮದ್ದಾಗಿದೆ.

**ಸಾಧನೆಗೆ ಸನ್ಮಾನ, ಸೇವೆಗೆ ಪ್ರೋತ್ಸಾಹ:**

ಸಮಾಜದಲ್ಲಿ ನಿರಂತರವಾಗಿ ಸೇವೆ ಸಲ್ಲಿಸುತ್ತಿರುವ ಅನೇಕ ಸಾಧಕರು ಪ್ರಚಾರದಿಂದ ದೂರ ಉಳಿದು ತಮ್ಮ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಂತಹ ಸಾಧನೆಗಳನ್ನು ಗುರುತಿಸಿ ಸಾರ್ವಜನಿಕವಾಗಿ ಗೌರವಿಸುವ ಮೂಲಕ ಮತ್ತಷ್ಟು ಜನರನ್ನು ಸಮಾಜಮುಖಿ ಕಾರ್ಯಗಳತ್ತ ಪ್ರೇರೇಪಿಸುವುದು ಪ್ರಶಸ್ತಿ ಪ್ರದಾನ ಸಮಾರಂಭದ ಪ್ರಮುಖ ಉದ್ದೇಶವಾಗಿದೆ.

ಶಿಕ್ಷಕರ ಸೇವೆಯನ್ನು ಗೌರವಿಸುವುದರೊಂದಿಗೆ ವಿವಿಧ ಕ್ಷೇತ್ರಗಳ ಸಾಧಕರನ್ನು ಒಂದೇ ವೇದಿಕೆಯಲ್ಲಿ ಸನ್ಮಾನಿಸುವ ಮೂಲಕ ಶಿಕ್ಷಣ ಮತ್ತು ಸಮಾಜಸೇವೆಯ ಮಹತ್ವವನ್ನು ಸಾರುವ ಪ್ರಯತ್ನ ಇದಾಗಿದೆ.

ಕಾರ್ಯಕ್ರಮದ ವಿವರ :

ಕಾರ್ಯಕ್ರಮ: ಆರ್ಯಭಟ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭ ವಿಶೇಷ ಕಾರ್ಯಕ್ರಮ: ಅಖಿಲ ಭಾರತ ಶಿಕ್ಷಕರ ಸಮ್ಮೇಳನ ಪ್ರಶಸ್ತಿಗಳು: ಡಾ. ಎಸ್. ರಾಧಾಕೃಷ್ಣನ್ ಅತ್ಯುತ್ತಮ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿ ಹಾಗೂ ಆರ್ಯಭಟ ರಾಷ್ಟ್ರೀಯ ಪ್ರಶಸ್ತಿ ದಿನಾಂಕ: ಸೆ.6, 2026, ಭಾನುವಾರ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಆಯೋಜಕರು: ಆರ್ಯಭಟ ಎಜುಕೇಷನಲ್ ಟ್ರಸ್ಟ್, ಕರ್ನಾಟಕ ಸಂಪರ್ಕ: 9986821096

# ಹೊಸಪೇಟೆ-ಅರಸಿಕೆರೆ ಡೆಮೋ ರೈಲಿಗೆ ಹಂಪಾಪಟ್ಟಣದಲ್ಲಿ ಅದ್ದೂರಿ ಸ್ವಾಗತ



ಹಗರಿಬೊಮ್ಮನಹಳ್ಳಿ. ಸುವರ್ಣ ಕರುನಾಡು28. ಹೊಸಪೇಟೆ–ಅರಸಿಕೆರೆ ಡೆಮೋ ರೈಲು ಹಂಪಾಪಟ್ಟಣದ ಮೂಲಕ ಸಂಚಾರ ಆರಂಭಿಸಿದ ಹಿನ್ನೆಲೆಯಲ್ಲಿ ಹಂಪಾಪಟ್ಟಣ ರೈಲ್ವೆ ಹೋರಾಟ ಸಮಿತಿ ವತಿಯಿಂದ ಶುಕ್ರವಾರ ರೈಲಿಗೆ ಅದ್ದೂರಿ ಸ್ವಾಗತ ಹಾಗೂ ಪೂಜಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ರೈಲು ಹಂಪಾಪಟ್ಟಣಕ್ಕೆ ಆಗಮಿಸುತ್ತಿದ್ದಂತೆ ರೈಲ್ವೆ ಹೋರಾಟ ಸಮಿತಿ ಹಾಗೂ ಗ್ರಾಮಸ್ಥರು ಪೂಜೆ ಸಲ್ಲಿಸಿ, ಹೂವಿನ ಹಾರ ಹಾಕಿ, ಸಿಹಿ ಹಂಚಿ ಸಂಭ್ರಮಿಸಿದರು. ಹಂಪಾಪಟ್ಟಣದ ಸಮಸ್ತ ನಾಗರಿಕರು ಪಕ್ಷಾತೀತವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು, ರೈಲು ಆಗಮನದ ಸಂಭ್ರಮ ಮುಗಿಲು ಮುಟ್ಟಿತ್ತು.

ಈ ಸಂದರ್ಭದಲ್ಲಿ ರೈಲ್ವೆ ಹೋರಾಟ ಸಮಿತಿ ಸಂಚಾಲಕ ಬುಡ್ಡಿ ಬಸವರಾಜ್ ಮಾತನಾಡಿ, "ಹೊಸಪೇಟೆ–ಅರಸಿಕೆರೆ ಡೆಮೋ ರೈಲು ಸಂಚಾರ ಆರಂಭವಾಗಿರುವುದು ಸಂತಸದ ಸಂಗತಿ. ಬೆಂಗಳೂರು ಕಡೆಗೆ ಸಂಚರಿಸುವ ರೈಲಿಗೆ ಹಂಪಾಪಟ್ಟಣದಲ್ಲಿ ನಿಲುಗಡೆ ಕಲ್ಪಿಸುವಂತೆ ಮುಂದಿನ ದಿನಗಳಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಹೋರಾಟ ನಡೆಸಬೇಕು. ಈ ಕುರಿತು ರೈಲ್ವೆ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿ ನಿಲುಗಡೆಗಾಗಿ ಒತ್ತಾಯಿಸೋಣ" ಎಂದು ಹೇಳಿದರು.

ಹಂಪಾಪಟ್ಟಣದಲ್ಲಿ ಬೆಂಗಳೂರು ರೈಲಿಗೆ ನಿಲುಗಡೆ ದೊರೆತರೆ ವಿದ್ಯಾರ್ಥಿಗಳು, ಉದ್ಯೋಗಿಗಳು, ರೈತರು, ವ್ಯಾಪಾರಸ್ಥರು ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ. ಸಾರ್ವಜನಿಕರು ರೈಲು ಸೇವೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಹೆಚ್ಚು ಭೀಮಪ್ಪ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಸದಸ್ಯ ಸಿ. ಶಿವಾನಂದ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪತ್ರಿ ಗೀತಾ ಎಲ್ಲಪ್ಪ, ಗ್ರಾಮ ಪಂಚಾಯಿತಿ ಸದಸ್ಯರಾದ ಸಿ.ಎಲ್. ಕುಮಾರ್, ಎನ್ನ ನಾಗರಾಜ್, ಬಿ. ನಾಗರಾಜ್ ಹಾಗೂ ಎಸ್. ಗಾಳಪ್ಪ ಉಪಸ್ಥಿತರಿದ್ದರು.

ಊರಿನ ಮುಖಂಡರಾದ ಟಿ. ಮಹೇಂದ್ರ, ವಿ. ಗೋವಿಂದ, ಭಜಂತ್ರಿ ಸೋಮನಾಥ್, ಹೊಚ್ಚು ಅಶೋಕ್, ಮುಂಡ್ರಿಗಿ ಮಂಜುನಾಥ್, ಟಿ. ಕೊಟ್ರೇಶ್, ಶಿಗೇನಹಳ್ಳಿ ಬಸವರಾಜ್, ಬಿ.ಸಿ. ನಾಗರಾಜ್, ಬಿ. ಕುಬೇರ, ಹಡಗಲಿ ಖಾಜಾ, ನಜೀರ್ ಸಾಬ್, ವಿ. ಹನುಮಂತ, ಜಿ. ಫಕೀರಪ್ಪ, ಕೆ.ಎಸ್. ಹುಲುಗಪ್ಪ, ಬೆಸ್ತರ ಮಂಜುನಾಥ್, ಟಿ. ಮಧು, ಟಿ. ಗೌತಮ್, ಟಿ. ಭರತ್, ಟಿ. ಹನುಮಂತ, ಟಿ. ಹುಲಗಪ್ಪ, ಬಂಟರ ಸೋಮನಾಥ್,. ಗುಬ್ಬೆ ಅಂಜಿನಿ . ಜಿ ರಾಘವೇಂದ್ರ. ಎಸ್ ಸಣ್ಣ ಮಂಜುನಾಥ. ವಿಠಲ. ಉಪ್ಪಾರ್ ನಾಗಪ್ಪ ಉಪ್ಪಾರ್ ಶಿವಪ್ಪ ಕುಮಾರ ಮೊದಲಿಯಾರ್. ಚರಂತೇಶ್..ಎ. ಕೇಶವಮೂರ್ತಿ, ಕೆ. ಸಂಗಮೇಶ್. ನಜೀರ್ ಸಾಬ್. ಚಮಲಪ್ಪ. ಮಾಯಪ್ಪ ಎಚ್ ಶಿವಾನಂದ ಟಿ ರಾಮಣ್ಣ.. ಹಾಗೂ ಬಸವರಾಜ್ ಉಲವತ್ತಿ ಸೇರಿದಂತೆ ರೈಲ್ವೆ ಹೋರಾಟ ಸಮಿತಿಯ ಸದಸ್ಯರು, ಯುವಕರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ರೈಲು ಸಂಚಾರ ಆರಂಭವಾದ ಸಂಭ್ರಮದ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ಕಾರ್ಯಕ್ರಮಕ್ಕೆ ಆಗಮಿಸಿದ್ದ ಸಾರ್ವಜನಿಕರಿಗೆ ಬೆಳಗಿನ ಉಪಹಾರದ ವ್ಯವಸ್ಥೆ ಮಾಡಲಾಗಿತ್ತು. ಸಾರ್ವಜನಿಕರು ಉಪಹಾರ ಸೇವಿಸಿ ಸಂಭ್ರಮ ಹಂಚಿಕೊಂಡರು.

ಹೊಸಪೇಟೆ–ಅರಸಿಕೆರೆ ಡೆಮೋ ರೈಲು ಸೇವೆ ಆರಂಭವಾಗಿರುವುದಕ್ಕೆ ಸಂತಸ ವ್ಯಕ್ತಪಡಿಸಿದ ಗ್ರಾಮಸ್ಥರು, ಮುಂದಿನ ದಿನಗಳಲ್ಲಿ ಹಂಪಾಪಟ್ಟಣದಲ್ಲಿ ಬೆಂಗಳೂರು ರೈಲಿಗೆ ನಿಲುಗಡೆ ದೊರೆಯುವಂತೆ ಒಗ್ಗಟ್ಟಿನಿಂದ ಹೋರಾಟ ಮುಂದುವರಿಸುವುದಾಗಿ ತಿಳಿಸಿದರು.

# ವರಮಹಾಲಕ್ಷ್ಮಿ ಪೂಜೆಯ ವಿಶೇಷತೆ



ಕುಣಿಗಲ್ : ನಮ್ಮ ನಾಡಿನಲ್ಲಿ ಈ ತಿಂಗಳೆಲ್ಲವೂ ವರಮಹಾಲಕ್ಷ್ಮಿಯ ಪೂಜೆಯನ್ನು ಬಾರಿ ವಿಜೃಂಭಣೆ ಯಿಂದ ಮನೆಗಳಲ್ಲಿ ಹೆಣ್ಣು ಮಕ್ಕಳು ಪೂಜೆ ಮಾಡುತ್ತಾರೆ. ಆಗಸ್ಟ್ ತಿಂಗಳಲ್ಲಿ ಬರುವ ಈ ವರಮಹಾಲಕ್ಷ್ಮಿ ಪೂಜೆಯ ವಿಶೇಷತೆ ಏನು ಅಂದರೆ ವರಮಹಾಲಕ್ಷ್ಮಿ ಹಬ್ಬವು ಶ್ರಾವಣ ಮಾಸದ ಹುಣ್ಣುಮೆಯ ಮುನ್ನ ಬರುವ ಶುಕ್ರವಾರದಂದು ಆಚರಿಸಲಾಗುವ ಅತ್ಯಂತ ಪವಿತ್ರವಾದ ಹಿಂದೂ ಹಬ್ಬವಾಗಿದೆ. ಸಂಪತ್ತು, ಆರೋಗ್ಯ ಮತ್ತು ಸುಖ–ಶಾಂತಿಯನ್ನು ನೀಡುವ ಮಹಾಲಕ್ಷ್ಮಿಯನ್ನು ಈ ದಿನ ವಿಶೇಷವಾಗಿ ಪೂಜಿಸಲಾಗುತ್ತದೆ. ದೇವಿಯನ್ನು ಪೂಜಿಸುವುದರಿಂದ ಅಷ್ಟಲಕ್ಷ್ಮಿಯರನ್ನು ಪೂಜಿಸಿದ ಫಲ ಸಿಗುತ್ತದೆ ಎಂಬ ನಂಬಿಕೆಯಿದೆ.ಹಬ್ಬದ ಮುಖ್ಯ ವಿಶೇಷತೆಗಳುಅಷ್ಟಲಕ್ಷ್ಮಿ ಪೂಜೆ: ಆದಿ ಲಕ್ಷ್ಮಿ, ಧನ ಲಕ್ಷ್ಮಿ, ಧೈರ್ಯ ಲಕ್ಷ್ಮಿ, ಸಂತಾನ ಲಕ್ಷ್ಮಿ, ವಿಜಯ ಲಕ್ಷ್ಮಿ, ವಿದ್ಯಾ ಲಕ್ಷ್ಮಿ, ಗಜ ಲಕ್ಷ್ಮಿ ಮತ್ತು ಧಾನ್ಯ ಲಕ್ಷ್ಮಿ ಎಂಬ ಎಂಟು ಸ್ವರೂಪಗಳ ಲಕ್ಷ್ಮಿಯನ್ನು ಪೂಜಿಸಿದಂತೆ.ಮುತ್ತೈದೆಯರ ಆಚರಣೆ: ಕುಟುಂಬದ ಕ್ಷೇಮ, ಯೋಗಕ್ಷೇಮ ಹಾಗೂ ಪತಿಯ ಆಯಸ್ಸು ಮತ್ತು ಆರೋಗ್ಯಕ್ಕಾಗಿ ವಿವಾಹಿತ ಮಹಿಳೆಯರು ಈ ವ್ರತವನ್ನು ಶ್ರದ್ಧೆಯಿಂದ ಆಚರಿಸುತ್ತಾರೆ.ಕಲಶ ಸ್ಥಾಪನೆ: ಮನೆಯಲ್ಲಿ ಅರಿಶಿನ, ಕುಂಕುಮ, ಹೂವುಗಳಿಂದ ಕಳಸವನ್ನು ಸಿಂಗರಿಸಿ, ಲಕ್ಷ್ಮಿ ದೇವಿಯ ರೂಪವೆಂದು ಭಾವಿಸಿ ಭಕ್ತಿಯಿಂದ ಪೂಜಿಸಲಾಗುತ್ತದೆ.ನೈವೇದ್ಯ ಮತ್ತು ದಕ್ಷಿಣಾಂಬೂಲ: ಒಬ್ಬಟ್ಟು, ವಿವಿಧ ಸಿಹಿ ತಿನಿಸುಗಳು ಮತ್ತು ಹಣ್ಣುಗಳನ್ನು ದೇವಿಗೆ ನೈವೇದ್ಯ ಮಾಡಿ, ಬಂದ ಮುತ್ತೈದೆಯರಿಗೆ ಅರಿಶಿನ–ಕುಂಕುಮ ಹಾಗೂ ಹಣ್ಣು–ಬಾಳೆಎಲೆ ನೀಡಿ ಗೌರವಿಸಲಾಗುತ್ತದೆ. ಈ ವರಮಹಾಲಕ್ಷ್ಮಿ ವ್ರತವೂ ಈತಿಂಗಳ ಎಲ್ಲಾ ಶುಕ್ರವಾರ ಆಚರಣೆ ಮಾಡುತ್ತಾರೆ ಈ ಹಬ್ಬದಲ್ಲಿ ಹೆಣ್ಣು ಮಕ್ಕಳ ಸಂಭ್ರಮ ವಂತೂ ಹೇಳತೀರದು ಈಹಬ್ಬದಲ್ಲಿ ವರಮಹಾಲಕ್ಷ್ಮಿಯು ಪೂಜೆ ಮಾಡುವ ಇಲ್ಲ ಆರಾಧಿಸುವವರೆಲ್ಲರಿಗೂ ವರ ಕೊಡುತ್ತಾಳೆ ಎಂಬ ನಂಬಿಕೆ


ಅನಂತ ಜನಶಕ್ತಿ ಪತ್ರಿಕೆಗೆ ಜಿಲ್ಲಾ ಹಾಗೂ ತಾಲೂಕು ವರದಿಗಾರರು ಬೇಕಾಗಿದ್ದಾರೆ..
ಆಸಕ್ತಿ ಇದ್ದವರು ಕೂಡಲೇ
ಸಂಪರ್ಕಿಸಿ - 94409 26774


# ಬೆವರಿನಲ್ಲಿ ಭಗವಂತ : ಡಾಕ್ಟರ್ ಅಮರಾವತಿ ದ್ರೇಹಾಚಾರ್ ಕರೆ



ಭಕ್ತಿ ಎಂದರೆ ಬೆವರಿನಲ್ಲಿ ಭಗವಂತನನ್ನು ಕಾಣುವುದು. ಪಂಚಭೂತಗಳಿಗೆ ಕೃತಜ್ಞತೆ ಅರ್ಪಿಸುವುದು. ಭಂಡತನ ವಿಲ್ಲದಿರುವುದೇ ಭಕ್ತಿ. ಮತ್ತೊಬ್ಬರ ಬದುಕಿನಲ್ಲಿ ಬೆಂಕಿ ಹಚ್ಚದಿರುವುದೇ ನಿಜವಾದ ಭಕ್ತಿ.ತಂದೆ ತಾಯಿ ಹಾಗೂ ಗುರುಸೇವೆಯಲ್ಲಿ ಸವೆಯುವುದು ಕಣ್ಣಿಗೆ ಕಾಣುವ ಭಕ್ತಿ ಎಂದು ಆಧ್ಯಾತ್ಮ ಚಿಂತಕ ಡಾಕ್ಟರ್ ಅಮರಾವತಿ ದ್ರೇಹಾಚಾರ್ ನುಡಿದರು. ಅವರು ಪಟ್ಟಣದ ಕಾಳಿಕಾದೇವಿ ದೇವಾಲಯದಲ್ಲಿ ವಿಶ್ವಶಂಕರ ಫೌಂಡೇಶನ್ ವತಿಯಿಂದ ನಡೆದ ಹುಣ್ಣಿಮೆಯ ಬೆಳದಿಂಗಳ ಪೂಜಾ ಕಾರ್ಯದ ಸತ್ಸಂಗದಲ್ಲಿ ಮಾತನಾಡುತ್ತಾ ಭಕ್ತಿಯೆಂಬುದು ಸಾಗರವಿದ್ದಂತೆ.

ಅಲ್ಲಿ ಸಾಧಕ ಭಕ್ತನು ಮಾತ್ರ ಈಜಬಲ್ಲ. ಆಡಂಬರ ಇಲ್ಲಿ ಬದುಕಲಾರದು. ರಾಶಿಗಟ್ಟಲೆ ಹೂವು, ಹಣ್ಣು ಕಾಯಿಗಳು ಬೇಕಿಲ್ಲ.ನಿರ್ಮಲವಾದ ಮನಸ್ಸಿನಿಂದ ಅಂ–ದರೆ ಕಾಯ,ವಾಚ,ಮನಸ ಬೇಡಿದರೆ ಸಾಕು ದೇವ ರೊಲುಮೆ ಆಗುತ್ತದೆ. ಹಡೆದವರನ್ನು ಗೌರವಯುತವಾಗಿ ಕಾಣದೆ,ಅವರ ಸೇವೆಯನ್ನು ಮಾಡದೆ ಗುಡಿ ಗೋಪುರಗಳ ಸುತ್ತುವುದು ಭಕ್ತಿಯಲ್ಲ. ಬ್ರಹ್ಮಾಂಡಕ್ಕೆ ಶಿರಬಾಗಬೇಕು. ಬ್ರಹ್ಮಾಂಡಕ್ಕೆ ನಮ್ಮನ್ನು ನೀಡಿದ ಮಾತಾಪಿತೃಗಳಿರುವ ಜಾಗವೇ ನಿಜವಾದ ದೇವಾಲಯ.ತಂದೆ ತಾಯಿಯ ಸೇವಕನಾಗಿ ಭಗವಂತನಲ್ಲಿ ವಿನೀತನಾದಾಗ ಭಕ್ತಿ ಎಂಬುದು ಬಂಗಾರವಾದೀತು. ಇದಕ್ಕೆ ಮೌಲ್ಯ ಜಾಸ್ತಿ. ವ್ಯಕ್ತಿತ್ವದ ಮೌಲ್ಯ ಶಿಖರವಾಗಬೇಕು.ಅಲ್ಲಿ ಬೆಳಕು ಮೂಡುತ್ತದೆ. ಈ ಬೆಳಕು ರಾತ್ರಿ ಹಗಲೆನ್ನದೇ ಪ್ರಕಾಶಿಸುತ್ತದೆ.

ಪ್ರಕಾಶವೆಂದರೆ ಕೇವಲ ಬೆಳಕಲ್ಲ. ಅದೊಂದುಅರ್ಪಣೆ. ಮನುಷ್ಯ ಒಳಿತು ಮಾಡಿದರೆ ಪುನಃ ಅವನಿಗೆ ಅದೇ ಒಳಿತು ವಾಪಾಸ್ ಆಗುತ್ತದೆ. ಕೆಡುಕು ಮಾಡಿದರೆ ಅದರ ಫಲ ಹುಡುಕಿಕೊಂಡು ಬಂದು ಹೊಡೆತ ಕೊಡುತ್ತದೆ ಎಂದು ನುಡಿದರು.

ಇದೇ ಸಂದರ್ಭದಲ್ಲಿ ಪ್ರಧಾನ ಅರ್ಚಕ ಶ್ರೀಧರ್ ದೊಡ್ಡೇರಿ ಸಾಯಿಪ್ರಸಾದ್ ಶಶಾಂಕ್ ಶ್ರೀನಿವಾಸ್ ರಮೇಶ್ ಹಾಗೂ ಮೊದಲಾದವರು ಉಪಸ್ಥಿತರಿದ್ದರು.

# ಹೈನುಗಾರಿಕೆಯಿಂದ ರೈತರು ಆರ್ಥಿಕವಾಗಿ ಸಬಲರಾಗಲಿ: ಎಸ್.ಆರ್. ಗೌಡ



ಶಿರಾ : ಸಣ್ಣ ಹಾಗೂ ಮಧ್ಯಮ ರೈತ ಕುಟುಂಬಗಳು ಆರ್ಥಿಕವಾಗಿ ಸಬಲರಾಗಬೇಕು. ಹೈನುಗಾರಿಕೆಯ ಮೂಲಕ ಜೀವನ ಕಟ್ಟಿಕೊಳ್ಳಲು ರಾಷ್ಟ್ರೀಕೃತ ಬ್ಯಾಂಕ್‌ಗಳ ಸಹಯೋಗದಲ್ಲಿ ಸಾಲ ಸೌಲಭ್ಯ ಕಲ್ಪಿಸಲಾಗುತ್ತಿದೆ. ಸೌಲಭ್ಯ ಪಡೆದ ರೈತರು ಉತ್ತಮ ತಳಿಯ ರಾಸುಗಳನ್ನು ಖರೀದಿಸಿ ಹೈನುಗಾರಿಕೆ ಕೈಗೊಳ್ಳುವ ಮೂಲಕ ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು ಎಂದು ತುಮಕೂರು ಹಾಲು ಒಕ್ಕೂಟದ ನಿರ್ದೇಶಕ ಎಸ್.ಆರ್. ಗೌಡ ಹೇಳಿದರು.

ಶಿರಾ ತಾಲೂಕಿನ ಯಾದಲಡಕು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಸದಸ್ಯರಿಗೆ ಎನ್‌ಆರ್‌ಎಲ್‌ಎಂ ಯೋಜನೆಯಡಿ 10 ಲಕ್ಷ ಬಡ್ಡಿರಹಿತ ಸಾಲ ವಿತರಿಸಿ ಅವರು ಮಾತನಾಡಿದರು.

ತಾಲೂಕಿನ ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರಿಗೆ ಹಂತ ಹಂತವಾಗಿ ಸಾಲ ಸೌಲಭ್ಯ ಕಲ್ಪಿಸುವ ಗುರಿ ಹೊಂದಲಾಗಿದೆ. ಯಾದಲಡಕು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಮೊದಲ ಹಂತದಲ್ಲಿ 14 ಫಲಾನುಭವಿಗಳಿಗೆ ತಲಾ 50 ಸಾವಿರದಂತೆ ಸಾಲ ವಿತರಿಸಲಾಗಿದೆ. ಮುಂದಿನ ಹಂತದಲ್ಲಿ ಹಾಲು ಉತ್ಪಾದಕರ ಸಂಘದ 40 ಸದಸ್ಯರಿಗೆ ಸಾಲ ಸೌಲಭ್ಯ ಕಲ್ಪಿಸುವ ಉದ್ದೇಶವಿದೆ ಎಂದು ತಿಳಿಸಿದರು.

ಮಳೆಯ ಅಭಾವದಿಂದ ರೈತರು ಕೃಷಿಯತ್ತ ಆಸಕ್ತಿ ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ ಹೈನುಗಾರಿಕೆ ಉತ್ತಮ ಪರ್ಯಾಯವಾಗಿದ್ದು, ಬಡ ಹಾಗೂ ಸಣ್ಣ ರೈತ ಕುಟುಂಬಗಳಿಗೆ ವರದಾನವಾಗಿದೆ. ಯುವಕರು ಹೈನುಗಾರಿಕೆಯತ್ತ ಹೆಚ್ಚಿನ ಆಸಕ್ತಿ ವಹಿಸಿ, ಶಿರಾ ಕ್ಷೇತ್ರದಲ್ಲಿ ಕ್ಷೀರ ಕ್ರಾಂತಿ ಮಾಡುವ ಸಂಕಲ್ಪಕ್ಕೆ ಕೈಜೋಡಿಸಬೇಕು ಎಂದು ಎಸ್.ಆರ್. ಗೌಡ ಕರೆ ನೀಡಿದರು.

ಹೈನುಗಾರಿಕೆಯಿಂದ ರೈತರಿಗೆ ನಿರಂತರ ಆದಾಯ ದೊರೆಯುವುದರ ಜತೆಗೆ ಕುಟುಂಬದ ಆರ್ಥಿಕ ಸ್ಥಿತಿ ಸುಧಾರಿಸಲು ಸಾಧ್ಯ. ಸರ್ಕಾರ ಹಾಗೂ ಸಹಕಾರ ಸಂಸ್ಥೆಗಳು ನೀಡುವ ಸಾಲ ಮತ್ತು ಇತರ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ಗುಣಮಟ್ಟದ ಹಾಲು ಉತ್ಪಾದನೆಗೆ ಒತ್ತು ನೀಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ತುಮುಲು ಉಪ ವ್ಯವಸ್ಥಾಪಕ ಬಿ. ಗಿರೀಶ್, ವಿಸ್ತರಣಾಧಿಕಾರಿ ಚೈತ್ರ, ಯಾದಲಡಕು ಹಾಲು ಉತ್ಪಾದಕರ ಮಹಿಳಾ ಸಂಘದ ಅಧ್ಯಕ್ಷೆ ರತ್ನಮ್ಮ, ಉಪಾಧ್ಯಕ್ಷೆ ಮಂಜುಳಾ, ಸಮಾಲೋಚಕರಾದ ಬಾಬಾ ಫಕ್ರುದ್ದೀನ್ ಪಿ.ಎಂ., ಹನುಮಂತರಾಯ, ಸಂಘದ ಸದಸ್ಯರಾದ ಎಲ್. ವಿನುತ, ಆರ್. ಪುಷ್ಪ, ಕಾಟಮ್ಮ, ಉಷಾದೇವಿ, ಮಂಜುಳಾ, ಗಂಗಮ್ಮ, ಶಿವಮ್ಮ, ಪ್ರಮೀಳಾ, ಜ್ಯೋತಿಲಕ್ಷ್ಮಿ, ಕಾರ್ಯದರ್ಶಿ ಲತಾ ಸೇರಿದಂತೆ ಹಾಲು ಉತ್ಪಾದಕರ ಸಂಘದ ಸದಸ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಪಿಟಿಸಿಎಲ್ ಕಾಯ್ದೆ ಆದೇಶದಂತೆ ಜಮೀನು ಬಿಡಿಸಿಕೊಡಲು ಆಗ್ರಹಿಸಿ ಪ್ರತಿಭಟನೆ: ರೊಚ್ಚಿಗೆದ್ದ ದಲಿತ ಮುಖಂಡರು



ಕುಣಿಗಲ್ : ಪಿಟಿಸಿಎಲ್ ಕಾಯ್ದೆ ಅಡಿ ದಲಿತರ ಪರವಾಗಿ ಜಮೀನು ಬಿಡಿಸಿಕೊಡಲು ಆದೇಶವಾಗಿದ್ದರೂ ಜಮೀನುಗಳನ್ನ ಬಿಡಿಸಿಕೊಡುವಲ್ಲಿ ವಿಫಲ ರಾಗಿ ರುವ ಕಂದಾಯ ಅಧಿಕಾರಿಗಳ ವಿರುದ್ಧ ತಾಲೂಕು ಕಚೇರಿ ಮುಂಭಾಗ ದಲಿತಪರ ಸಂಘಟನೆಗಳು ಪ್ರತಿಭಟನೆ ನಡೆಸಿದರು,

ಈ ಸಂದರ್ಭದಲ್ಲಿ ಮಾತನಾಡಿದ ದಲಿತ ಮುಖಂಡ ದಲಿತ್ ನಾರಾಯಣ್ ಅವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಭೂಮಿ ರಕ್ಷಣೆಗಾಗಿ ರೂಪಿಸಿರುವ ಪಿಟಿಸಿಎಲ್ ಕಾಯ್ದೆ 1978 ಅನ್ನು ಕಂದಾಯ ಇಲಾಖೆ ಅಧಿಕಾರಿಗಳ ಮಾತಿಗೆ ಕಿವಿ ಕೊಟ್ಟು ತಾಲೂಕು ದಂಡಾಧಿಕಾರಿಗಳು ಗಾಳಿಗೆ ತೂರುತ್ತಿದ್ದಾರೆ, ಕಾಯ್ದೆಗೆ ವಿರುದ್ಧವಾಗಿ ಆದೇಶಗಳನ್ನು ಹೊರಡಿಸುವ ಮೂಲಕ ಖಅ/ಖಖಿ ಸಮುದಾಯದ ಜನರ ಜಮೀನುಗಳನ್ನು ಅನ್ಯರಿಗೆ ವರ್ಗಾವಣೆ ಮಾಡಲು ಅನುವು ಮಾಡಿಕೊಡಲಾಗುತ್ತಿದೆ, ಇದರಿಂದ ನೂರಾರು ಕುಟುಂಬಗಳು ತಮ್ಮ ಪೂರ್ವಿಕರ ಆಸ್ತಿಯನ್ನು ಕಳೆದುಕೊಳ್ಳುವ ಸ್ಥಿತಿ ನಿರ್ಮಾಣವಾಗಿದೆ, ಕಂದಾಯ ಇಲಾಖೆ ಅಧಿಕಾರಿಗಳ ಸಹಕಾರದಿಂದಲೇ ಸಾಕಷ್ಟು ಅವ್ಯವಹಾರ ನಡೆಯುತ್ತಿದೆ,

ಪಿಟಿಸಿಎಲ್ ಕಾಯ್ದೆಯಡಿ ದಲಿತರ ಪರವಾಗಿ ಉಪವಿಭಾಗಾಧಿಕಾರಿ ಗಳ ನ್ಯಾಯಾಲಯದಲ್ಲಿ ಆದೇಶವಾಗಿದ್ದರೂ ಸಹ ಅಧಿಕಾರಿಗಳು ಉದಾಸೀನತೆ ಅಸಡ್ಡೆ ಮನೋಭಾವನೆ ತೋರಿ ಜಮೀನು ಬಿಡಿಸಿಕೊಡುವಲ್ಲಿ ವಿಫಲವಾಗಿದ್ದಾರೆ, ಕೂಡಲೇ ಇಂತಹ ಅಧಿಕಾರಿಗಳನ್ನು ಅಮಾನತ್ತುಪಡಿಸಿ ವರ್ಗಾವಣೆ ಮಾಡಬೇಕೆಂದು ದಲಿತ ಸಂಘಟನೆಗಳ ಒಕ್ಕೂಟಗಳು ಆಗ್ರಹಿಸಿದರು,,

ತಾಲೂಕಿನ ಕೊತ್ತಗೆರೆ ಹೋಬಳಿ ಕೊರಮರಪಾಳ್ಯ ಗ್ರಾಮದ ನಿವಾಸಿಗಳಾದ ಮನು ಬಿನ್ ಲೇಟ್ ನರಸಯ್ಯ ಸರ್ವೇ ನಂಬರ್ 5, ರಲ್ಲಿ 3 ಎಕರೆ ಮತ್ತು ಗಂಗರಂಗಯ್ಯ ಬಿನ್ ವೆಂಕಟರಂಗಯ್ಯ ಸರ್ವೇ ನಂಬರ್ 4, ರಲ್ಲಿ 2, 31ಗುಂಟೆ ದೊಡ್ಡ ಗೋವಿಂದಯ್ಯ ಬಿನ್ ವೆಂಕಟಪ್ಪ ಸರ್ವೆ ನಂಬರ್ 3. ರಲ್ಲಿ 3 ಎಕರೆ ಹೇಮ ಬಿನ್ ವೆಂಕಟಪ್ಪ ಸರ್ವೆ ನಂಬರ್ 7, ರಲ್ಲಿ 1, 19 ಗುಂಟೆ ಮತ್ತು ಹೇಮಾ ಬಿನ್ ವೆಂಕಟಪ್ಪ ಸರ್ವೆ ನಂಬರ್ 7, ರಲ್ಲಿ 1, 20 ಗುಂಟೆ ಇವರ ವಂಶಸ್ಥರಿಗೆ ಮುಂಜೂರಾಗಿದ್ದು ಆದರೆ ಸರ್ಕಾರದ ಅನುಮತಿ ಇಲ್ಲದೆ ಮಾರಾಟವಾಗಿರುವುದರಿಂದ ಪಿಟಿಸಿಎಲ್ ಕಾಯ್ದೆ ಅನ್ವಯ ಅವರ ವಂಶಸ್ಥರು ಜಮೀನು ವಾಪಾಸ್ ಪಡೆಯಲು ಉಪ ವಿಭಾಗ ಅಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರು ಎನ್ನಲಾಗಿದೆ.

ಉಪವಿಗಾಧಿಕಾರಿಗಳ ನ್ಯಾಯಾಲಯ ದಲಿತರ ಪರವಾಗಿ ಆದೇಶ ಮಾಡಿ ಅವರ ಹೆಸರಿಗೆ ಖಾತೆ ಮತ್ತು ಪಹಣಿ ದಾಖಲಿಸಿ ಜಮೀನಿನ ಸ್ವಾಧೀನ ಅನುಭವವನ್ನು ಬಿಡಿಸಿಕೊಡಲು ತಹಸೀಲ್ದಾರ್ ಅವರಿಗೆ ಸೂಚನೆ ನೀಡಲಾಗಿತ್ತು,

ತುಮಕೂರು ಉಪವಿಭಾಗಧಿಕಾರಿಗಳು ತುಮಕೂರು ಉಪ ವಿಭಾಗ ರವರ ಆದೇಶದಂತೆ ಮೂಲ ಮಂಜುರಿದಾರರ ವಾರಸುದಾರರಾದ ದಲಿತರಿಗೆ ಜಮೀನು ಬಿಡಿಸಿಕೊಡಲು ಪೊಲೀಸರಿಗೆ ಮೂರು ಬಾರಿ ಪತ್ರ ಬರೆದು ಸಾಕಷ್ಟು ಬಾರಿ ದಿನಾಂಕಗಳನ್ನು ಗುರುತಿಸಿದ್ದರು, ಸಹ ಆ ದಿನದಂದು ಏನಾದರೂ ಸಬೂಬುಗಳನ್ನು ಹೇಳಿ ತಪ್ಪಿಸಿಕೊಳ್ಳುವ ಮೂಲಕ ದಲಿತರಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದು ದಲಿತ ಮುಖಂಡರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು,,

ನ್ಯಾಯಾಲಯದ ಆದೇಶ ಮತ್ತು ದಾಖಲೆಗಳೆಲ್ಲ ದಲಿತರ ಪರವಾಗಿದ್ದರು ದಲಿತರಿಗೆ ಜಮೀನು ಬಿಡಿಸಿಕೊಡದೆ ಮೇಲಿನ ನ್ಯಾಯಾಲಯದಲ್ಲಿ ತಡೆ–ಯಜ್ಞ ಮತ್ತು ಪ್ರಕರಣ ದಾಖಲಿಸಲು ತಾಲೂಕು ದಂಡಾಧಿಕಾರಿಗಳು ಅವಕಾಶ ಮಾಡಿಕೊಡುತ್ತಿದ್ದಾರೆ, ಇದರಿಂದ ದಲಿತರು ಮೇಲಿನ ನ್ಯಾಯಾಲಯಗಳಿಗೆ ಹೋಗಲು ಶಕ್ತಿ ಇಲ್ಲದವರ ಬಾಯಿ ಮುಚ್ಚಿಸುವ ಕೆಲಸ ಮಾಡುವುದರ ಜೊತೆಗೆ ಪಿಟಿಸಿಎಲ್ ಕಾಯ್ದೆಯ ದುರ್ಬಲಗೊಳಿಸುವ ಹುನ್ನಾರ ನಡೆಯುತ್ತಿದೆ ಎಂದು ತಾಲೂಕು ಆಡಳಿತ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳ ವಿರುದ್ಧ ತೀವ್ರ ಬೇಸರ ವ್ಯಕ್ತಪಡಿಸಿದರು,

ಈ ಕೂಡಲೇ ಅಧಿಕಾರಿಗಳು ಎಚ್ಚೆತ್ತುಕೊಂಡು ನ್ಯಾಯಾಲಯದ ಆದೇಶದಂತೆ ದಲಿತರಿಗೆ ಜಮೀನು ಬಿಡಿಸಿಕೊಡದಿದ್ದರೆ ಹೋರಾಟವನ್ನು ತೀವ್ರ ಗೊಳಿಸಲಾಗುವುದು, ಮತ್ತು ಈ ಹೋರಾಟಕ್ಕೆ ನ್ಯಾಯ ಸಿಗದಿದ್ದರೆ ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ದಲಿತ ಪರ ಸಂಘಟನೆಗಳ ಮುಖಂಡರು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ದಲಿತ ಸಂಘರ್ಷ ಸಮಿತಿ ತುಮಕೂರು ಜಿಲ್ಲಾ ಸಂಚಾಲಕರಾದ ವಿ ಶಿವಶಂಕರ್, ಮಾದರ ಮಹಾಸಭಾ ತಾಲೂಕು ಅಧ್ಯಕ್ಷ ಮಲ್ಲಿಪಾಳ್ಯ ಶ್ರೀನಿವಾಸ್, ಬಿಳಿ ದೇವಾಲಯ ದೇವರಾಜು, ಉರ್ಕೆಹಳ್ಳಿ ರಾಜಣ್ಣ, ಮಲ್ಲಿಪಾಳ್ಯ ರಂಗಸ್ವಾಮಿ, ಸೇರಿದಂತೆ ಉಪಸ್ಥಿತರಿದ್ದರು,,

# ಸೂಳೆಕೆರೆ ಮೀನುಮರಿ ಪಾಲನಾ ಕೇಂದ್ರಕ್ಕೆ ಸಚಿವ ಬಸವಂತಪ್ಪ ಭೇಟಿ



ದಾವಣಗೆರೆ: ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಪ್ರಸಿದ್ಧ ಶಾಂತಿಸಾಗರ (ಸೂಳೆಕೆರೆ)ದಲ್ಲಿರುವ ಮೀನುಮರಿ ಪಾಲನಾ ಕೇಂದ್ರಕ್ಕೆ ಮೀನುಗಾರಿಕೆ, ಬಂದರು, ಒಳನಾಡು ಜಲಸಾರಿಗೆ ಹಾಗೂ ಮುಜರಾಯಿ ಸಚಿವ ಕೆ.ಎಸ್. ಬಸವಂತಪ್ಪ ಶುಕ್ರವಾರ ಭೇಟಿ ನೀಡಿ ಪ್ರಗತಿ ಪರಿಶೀಲನೆ ನಡೆಸಿದರು.

ಪಾಲನಾ ಕೇಂದ್ರದಲ್ಲಿ ಮೀನುಮರಿಗಳ ಸಾಕಾಣಿ–ಕೆ, ಬೆಳವಣಿಗೆ, ಆಹಾರ ಪೂರೈಕೆ ಸೇರಿದಂತೆ ವಿವಿಧ ಚಟುವಟಿಕೆಗಳನ್ನು ವೀಕ್ಷಿಸಿದ ಸಚಿವರು, ಕೇಂದ್ರದ ಕಾರ್ಯನಿರ್ವಹಣೆ ಹಾಗೂ ಪ್ರಸ್ತುತ ಸ್ಥಿತಿಗತಿಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು. ಕೇಂದ್ರದ ಅಭಿವೃದ್ಧಿಗೆ ಅಗತ್ಯವಿರುವ ಕ್ರಮಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿ ಸಲಹೆ ಹಾಗೂ ಸೂಚನೆಗಳನ್ನು ನೀಡಿದರು.

ಮೀನುಗಾರರ ಅಹವಾಲು ಆಲಿಸಿದ ಸಚಿವರು: ಸೂಳೆಕೆರೆಯನ್ನು ಅವಲಂಬಿಸಿಕೊಂಡು ಸುಮಾರು 200ರಿಂದ 300 ಕುಟುಂಬಗಳು ಮೀನುಗಾರಿಕೆಯನ್ನೇ ಪ್ರಮುಖ ಕಸುಬನ್ನಾಗಿಸಿಕೊಂಡು ಜೀವನ ನಡೆಸುತ್ತಿವೆ.

ಕೆರೆಯಲ್ಲಿ ಮೀನುಗಳ ಸಂಖ್ಯೆ ಹೆಚ್ಚಳವಾಗುವುದರಿಂದ ಮೀನುಗಾರರಿಗೆ ಹೆಚ್ಚಿನ ಆದಾಯ ದೊರೆಯಲಿದೆ.

ಆದ್ದರಿಂದ ಉತ್ತಮ ತಳಿಯ ಮೀನುಮರಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕೆರೆಗೆ ಬಿಡಬೇಕು ಎಂದು ಸ್ಥಳೀಯ ಮೀನುಗಾರರು ಸಚಿವರಿಗೆ ಮನವಿ ಸಲ್ಲಿಸಿದರು.

ಮೀನುಗಾರರ ಮನವಿಗೆ ಸ್ಪಂದಿಸಿದ ಸಚಿವ ಕೆ.ಎಸ್. ಬಸವಂತಪ್ಪ, ಸೂಳೆಕೆರೆಯಲ್ಲಿ ಉತ್ತಮ ತಳಿಯ ಮೀನುಮರಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಬಿಡಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಈ ಸಂಬಂಧ ಮೀನುಗಾರಿಕೆ ಇಲಾಖೆ ನಿರ್ದೇಶಕ ದಿನೇಶ್ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಮೀನುಗಾರರ ಜೀವನೋಪಾಯಕ್ಕೆ ಅನುಕೂಲವಾಗುವಂತೆ ಇಲಾಖೆ ವತಿಯಿಂದ ಅಗತ್ಯ ಸಹಕಾರ ನೀಡಲಾಗುವುದು ಎಂದು ಸಚಿವರು ತಿಳಿಸಿದರು.

# ಕರುಮುಡಿಯಲ್ಲಿ ಅಕ್ರಮ ಸಾರಾಯಿ ರಾಜಾರೋಷ ದರ್ಬಾರ್:

## ರೋಣ ಅಬಕಾರಿ ಇಲಾಖೆಯ ಜಾಣಕುರುಡಿಗೆ ಗ್ರಾಮಸ್ಥರ ಧಿಕ್ಕಾರ!

**ವಿಶೇಷ ವರದಿ :**

ಗದಗ : ರೋಣ ತಾಲೂಕಿನ ಕರುಮುಡಿ ಗ್ರಾಮದಲ್ಲಿ ಅಕ್ರಮ ಸಾರಾಯಿ ಮಾರಾಟ ಮಿತಿಮೀರಿದ್ದು, ಅಬಕಾರಿ ಹಾಗೂ ಪೊಲೀಸ್ ಇಲಾಖೆಯ ಕಣ್ಣೆದುರೇ ಎಗ್ಗಿಲ್ಲದೆ ನಡೆಯುತ್ತಿದೆ ಎಂಬ ಗಂಭೀರ ಆರೋಪ ಕೇಳಿಬಂದಿದೆ. ಸಾಲು ಸಾಲು ಎಫ್‌ಐಆರ್‌ಗಳು ದಾಖಲಾಗಿದ್ದರೂ ಆರೋಪಿ ಮಾತ್ರ ರಾಜಾರೋಷವಾಗಿ ಅಕ್ರಮ ಮದ್ಯ ಮಾರಾಟ ಮುಂದುವರಿಸಿದ್ದು, ಅಧಿಕಾರಿಗಳ ನಿಷ್ಕ್ರಿಯತೆ ಹಾಗೂ ಸಂಶಯಾಸ್ಪದ ಮೌನದ ವಿರುದ್ಧ ದಲಿತ ಸಂಘರ್ಷ ಸಮಿತಿ ಹಾಗೂ ಗ್ರಾಮಸ್ಥರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.




**ಮನೆಯೇ ಅಕ್ರಮ ದಂಧೆಯ ಅಡ್ಡೆ :-**

ಗ್ರಾಮದ ಈರವ್ವ ಕೋಂ ಕಲ್ಲಪ್ಪ ಕುರಹಟ್ಟಿ ಎಂಬ ಮಹಿಳೆ ನಿರಂತರವಾಗಿ ಅಕ್ರಮ ಮದ್ಯ ಮಾರಾಟ ದಂಧೆಯಲ್ಲಿ ತೊಡಗಿದ್ದಾಳೆ. ಗ್ರಾಮದ ಬಸ್ ನಿಲ್ದಾಣ, ಕಾಲೇಶ್ವರ ಗುಡಿ ಹತ್ತಿರದ ಸಾರ್ವಜನಿಕ ರಸ್ತೆ ಹಾಗೂ ತನ್ನ ಮನೆಯನ್ನೇ ಅಡ್ಡೆಯನ್ನಾಗಿ ಮಾಡಿಕೊಂಡು ಟೆ-ಟ್ರಾ ಪ್ಯಾಕೆಟ್‌ಗಳಲ್ಲಿ ಮದ್ಯ ಮಾರಾಟ ಮಾಡುತ್ತಿರುವ ದೃಶ್ಯಗಳು ಸ್ಥಳೀಯರ ಮೊಬೈಲ್ ಕ್ಯಾಮೆರಾಗಳಲ್ಲಿ ರೆಡ್ ಹ್ಯಾಂಡ್ ಆಗಿ ಸೆರೆಯಾಗಿವೆ. ಗ್ರಾಮಸ್ಥರು ಇದನ್ನು ಪ್ರಶ್ನಿಸಿದರೆ ಸಾರ್ವಜನಿಕರ ಮೇಲೆಯೇ ಕೂಗಾಡಿ ಗಲಾಟೆ ಮಾಡುತ್ತಿದ್ದಾಳೆ.

**ದಾಳಿ ನಡೆಸಿದರೂ ನಿಲ್ಲದ ದಂಧೆ :-**

ಜುಲೈ 16, 2026 ರಂದು ರೋಣ ಅಬಕಾರಿ ಉಪ ನಿರೀಕ್ಷಕ ಜಗದೀಶ್‌ಚಂದ್ರ ವಿ. ಆಳದಕಟ್ಟಿ ಅವರ ತಂಡ ದಾಳಿ ನಡೆಸಿ 3.24 ಲೀಟರ್ (36 ಒರಿಜಿನಲ್ ಚಾಯ್ಸ್ ವಿಸ್ಕಿ ಪ್ಯಾಕೆಟ್) ಮದ್ಯ ಜಪ್ತಿ ಮಾಡಿ, ಕರ್ನಾಟಕ ಅಬಕಾರಿ ಕಾಯ್ದೆ 1965ರ ವಿವಿಧ ಕಲಂ ಅಡಿಯಲ್ಲಿ ಪ್ರಕರಣ ದಾಖಲಿಸಿತ್ತು. ತದನಂತರ ಆಗಸ್ಟ್ 9 ರಂದು ಅಧಿಕಾರಿಗಳು ದಾಳಿಗೆ ಬಂದಾಗ ಸದರಿ ಮಹಿಳೆ ಮನೆಯೊಳಗೆ ನೇಣು ಹಾಕಿಕೊಳ್ಳುವ ಬೆದರಿಕೆ ನಾಟಕವಾಡಿ ಸ್ಥಳೀಯರನ್ನು ಬೆದರಿಸಲು ಯತ್ನಿಸಿದ್ದಳು. ಬಳಿಕ ಅಬಕಾರಿ ನಿರೀಕ್ಷಕಿ ಶ್ರೀದೇವಿ ಕೊಳ್ಳಿ ಹಾಗೂ ಸಿಬ್ಬಂದಿ ಪ್ರಕರಣ ದಾಖಲಿಸಿಕೊಂಡಿದ್ದರು.

ಇಷ್ಟೇ ಅಲ್ಲದೆ, ಆಗಸ್ಟ್ 17, 2026 ರಂದು ರೋಣ ಪೊಲೀಸ್ ಠಾಣೆಯ ಹೆಚ್.ಸಿ. ಜೆ. ಬಿ. ಪೂಜಾರ್ ನೀಡಿದ ದೂರಿನನ್ವಯ ಸಾರ್ವಜನಿಕ ರಸ್ತೆಯಲ್ಲಿ ಅಕ್ರಮ ಮದ್ಯ ಸೇವನೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮತ್ತೊಂದು ಎಫ್‌ಐಆರ್ ದಾಖಲಾಗಿದೆ. ಆದರೂ ಆರೋಪಿ "ಪೊಲಿಸರು ಬಂದರೆ ಮೂರು-ಆರು ತಿಂಗಳಿಗೊಮ್ಮೆ ದಂಡ ಕಟ್ಟಿ ಬರುತ್ತೇವೆ, ನಮ್ಮನ್ನು ಕೇಳುವವರು ಯಾರು?" ಎಂದು ಸಾರ್ವಜನಿಕವಾಗಿ ಸವಾಲು ಹಾಕುತ್ತಾ ಅಕ್ರಮ ವ್ಯವಹಾರವನ್ನು ಮುಂದುವರಿಸಿದ್ದಾಳೆ.

> ಬೃಹತ್ ಧರಣಿ ಸತ್ಯಾಗ್ರಹದ ಎಚ್ಚರಿಕೆ
> "ಆಗಸ್ಟ್ 27, 2026 ರಂದು ಅಬಕಾರಿ ಇಲಾಖೆಗೆ ಅಕ್ರಮ ಮದ್ಯ ಮಾರಾಟ ಬಂದ್ ಮಾಡುವಂತೆ ಮತ್ತೊಮ್ಮೆ ಅಧಿಕೃತ ಮನವಿ ಸಲ್ಲಿಸಿದ್ದೇವೆ. ಕರುಮುಡಿ ಗ್ರಾಮದಲ್ಲಿ ಅಕ್ರಮ ಮದ್ಯದ ಜಾಲವನ್ನು ಶಾಶ್ವತವಾಗಿ ಮಟ್ಟಹಾಕಿ ಸಂಪೂರ್ಣ ಪಾನಮುಕ್ತ ಗ್ರಾಮವನ್ನಾಗಿ ಘೋಷಿಸಬೇಕು. ಇಲ್ಲದಿದ್ದರೆ ರೋಣ ಅಬಕಾರಿ ಕಚೇರಿ ಎದುರು ದಲಿತ ಸಂಘರ್ಷ ಸಮಿತಿ (ಡಿಎಸ್‌ಎಸ್) ವತಿಯಿಂದ ಬೃಹತ್ ಧರಣಿ ಸತ್ಯಾಗ್ರಹ ನಡೆಸಲಾಗುವುದು."
> –ಮೈಲಾರಪ್ಪ ನಿಂಗಬಸಪ್ಪ ಛಲವಾದಿ,
> ಡಿಎಸ್‌ಎಸ್ ಗ್ರಾಮ ಘಟಕ ಸಂಚಾಲಕರು,
> ಕರುಮುಡಿ.

**ಅಧಿಕಾರಿಗಳ ವಿರುದ್ಧ ಹಪ್ತಾ ಆರೋಪ :-**

ರೋಣ ಅಬಕಾರಿ ಕಚೇರಿಗೆ ತೆರಳಿದ ಗ್ರಾಮಸ್ಥರು ಅಬಕಾರಿ ನಿರೀಕ್ಷಕಿ ಶ್ರೀದೇವಿ ಕೊಳ್ಳಿ ಅವರನ್ನು ನೇರವಾಗಿ ತರಾಟೆಗೆ ತೆಗೆದುಕೊಂಡಿ-ದ್ದಾರೆ. ಅಧಿಕಾರಿಗಳು ಸರಿಯಾಗಿ ಬೀಟ್ ಗಸ್ತಿಗೆ ಬರುವುದಿಲ್ಲ, ಮಾಹಿತಿ ನೀಡಿದರೂ ಕ್ರಮ ಕೈಗೊಳ್ಳದೆ ನಾಮಕಾವಸ್ಥೆ ಕೇಸ್ ಹಾಕಿ ಕೈತೊಳೆದುಕೊಳ್ಳುತ್ತಾರೆ ಎಂದು ಆಕ್ರೋಶ ಹೊರಹಾಕಿದ್ದಾರೆ.

ಆರೋಪಿಯಿಂದ ಅಧಿಕಾರಿಗಳಿಗೆ ಪ್ರತಿ ತಿಂಗಳು ಹಪ್ತಾ ತಲುಪುತ್ತಿದೆಯೇ ಎಂಬ ಬಲವಾದ ಸಂಶಯ ಗ್ರಾಮಸ್ಥರಲ್ಲಿ ಮೂಡಿದೆ. ರಾಜ್ಯ ಮಹಿಳಾ ಆಯೋಗದ ಕಟ್ಟುನಿಟ್ಟಿನ ಸೂಚನೆಯಿದ್ದರೂ ಇಲಾಖೆ ಕ್ಯಾರೇ ಎನ್ನದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಇಷ್ಟೆಲ್ಲಾ ಸಾಕ್ಷ್ಯಾಧಾರಗಳು ಹಾಗೂ ಸಾಲು ಸಾಲು ಎಫ್‌ಐಆರ್‌ಗಳು ಕಣ್ಣೆದುರಿದ್ದರೂ ರೋಣ ಅಬಕಾರಿ ಇಲಾಖೆ ಕಣ್ಮುಚ್ಚಿ ಕುಳಿತಿರಲು ಸಾಧ್ಯವಿಲ್ಲ. ಈಗಲಾದರೂ ಅಬಕಾರಿ ನಿರೀಕ್ಷಕಿ ಶ್ರೀದೇವಿ ಕೊಳ್ಳಿ ಹಾಗೂ ಮೇಲಧಿಕಾರಿಗಳು ಎಚ್ಚೆತ್ತು-ಕೊಂಡು ಕರುಮುಡಿ ಗ್ರಾಮದ ಅಕ್ರಮ ಸಾರಾಯಿ ಜಾಲಕ್ಕೆ ಶಾಶ್ವತ ಕಡಿವಾಣ ಹಾಕುತ್ತಾರೋ ಅಥವಾ ಎಂದಿನಂತೆ ಜಾಣಕುರುಡು ಪ್ರದರ್ಶಿಸುತ್ತಾರೋ ಎಂಬುದನ್ನು ಕಾದು ನೋಡಬೇಕಿದೆ.

ಗ್ರಾಮದ ಮಹಿಳೆಯರು, ಯುವಕರು ಹಾಗೂ ಬಡ ಕುಟುಂಬಗಳ ನೆಮ್ಮದಿ ಕಸಿದಿರುವ ಈ ದಂಧೆ ಸಂಪೂರ್ಣವಾಗಿ ನಾಶವಾಗಿ ಕರುಮುಡಿ ಗ್ರಾಮವು 'ಸಾರಾಯಿ ಮುಕ್ತ ಗ್ರಾಮ' ಎಂದು ಘೋಷಣೆಯಾಗುವವರೆಗೂ ಜನಪರ ಕಾಳಜಿಯ ನಮ್ಮ ಈ ಮಾಧ್ಯಮದ ಸಮರ ನಿಲ್ಲುವುದಿಲ್ಲ.

# ಕನಕಲಬಂಡೆಯಲ್ಲಿ ಲಘು ಬಾಂಬ್ ಸ್ಫೋಟ ರೈತ ಆಶ್ಚರ್ಯಕರ ರೀತಿಯಲ್ಲಿ ಪಾರು!



ಪಾವಗಡ : ಕೊಳವೆಬಾವಿಯ ಮೋಟಾರ್ ಸ್ಟಾರ್ಟ್ ಬಟನ್ ಒತ್ತುತ್ತಿದ್ದಂತೆಯೇ ಲಘು ಬಾಂಬ್ ಸ್ಫೋಟಗೊಂಡು, ರೈತನೊಬ್ಬ ಕೂದಲೆಳೆಯ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿರುವ ದಿಗಿಲು ಹುಟ್ಟಿಸುವ ಘಟನೆ ತಾಲೂಕಿನ ಕನಕಲಬಂಡೆ ಗ್ರಾಮದಲ್ಲಿ ನಡೆದಿದೆ. ಹಳೆಯ ವೈಷಮ್ಯದ ಹಿನ್ನೆಲೆಯಲ್ಲಿ ಮಾಜಿ ನಕ್ಸಲನೊಬ್ಬ ಈ ಕೊಲೆ ಸಂಚು ರೂಪಿಸಿದ್ದಾನೆ ಎಂಬ ಆರೋಪ ಕೇಳಿಬಂದಿದ್ದು, ಸ್ಥಳಕ್ಕೆ ಭೇಟಿ ನೀಡಿರುವ ಪೊಲೀಸರು ಹಾಗೂ ವಿಧಿ ವಿಜ್ಞಾನ ತಜ್ಞರ ತಂಡ ತನಿಖೆ ಚುರುಕುಗೊಳಿಸಿದೆ.

ಗ್ರಾಮದ ತೋಟವೊಂದರಲ್ಲಿ ಲಘು ಬಾಂಬ್ ಸ್ಫೋಟಗೊಂಡ ಘಟನೆ ನಡೆದಿದ್ದು, ಅದೃಷ್ಟವಶಾತ್ ರೈತ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಗ್ರಾಮದ ರೈತ ಗಿರಿಯಪ್ಪ ಎಂಬುವವರು ತಮ್ಮ ತೋಟಕ್ಕೆ ನೀರು ಹಾಯಿಸಲು ಕೊಳವೆಬಾವಿಯ ಮೋಟಾರ್ ಆನ್ ಮಾಡಲು ಹೋದಾಗ ಈ ಘಟನೆ ಸಂಭವಿಸಿದೆ. ಸ್ಟಾರ್ಟರ್ ಬಟನ್ ಒತ್ತಿದ ತಕ್ಷಣವೇ ಕೆಳಗಿನಿಂದ ಲಘು ಸ್ಫೋಟ ಸಂಭವಿಸಿದೆ. ತಕ್ಷಣ ಎಚ್ಚೆತ್ತ ಗಿರಿಯಪ್ಪ ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಘಟನೆಯ ಬಳಿಕ ರೈತ ಗಿರಿಯಪ್ಪ ಅವರು ಕುಟುಂಬಸ್ಥರು, ಗ್ರಾಮಸ್ಥರು ಹಾಗೂ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಪೊಲೀಸ್ ವೃತ್ತ ನಿರೀಕ್ಷಕರಾದ ಸುರೇಶ್ ಅವರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದರು. ನಂತರ ಮಧುಗಿರಿ ಉಪವಿಭಾಗದ ಡಿವೈಎಸ್‌ಪಿ ಮಂಜುನಾಥ್ ಅವರ ತಂಡ ಹಾಗೂ ತನಿಖಾ ತಂಡ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದೆ. ಸ್ಫೋಟಗೊಂಡ ಸಾಮಗ್ರಿಗಳನ್ನು ವಶಕ್ಕೆ ಪಡೆದಿರುವ ಪೊಲೀಸರು, ಹೆಚ್ಚಿನ ತನಿಖೆಗಾಗಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರವಾನಿಸಿದ್ದಾರೆ.

ಈ ಕುರಿತು ಮಾತನಾಡಿದ ತೋಟದ ಮಾಲೀಕ ಗಿರಿಯಪ್ಪ ನಾವು ಕಳೆದ ಮೂರು ದಿನಗಳಿಂದ ಹೊಲಕ್ಕೆ ನೀರು ಹಾಯಿಸಿರಲಿಲ್ಲ. ಬೆಳಿಗ್ಗೆ ಮೋಟಾರ್ ಆನ್ ಮಾಡಿದಾಗ ಜಮೀನಿನಲ್ಲಿ ಲಘು ಸ್ಫೋಟವಾಯಿತು. ಈ ಹಿಂದೆ ನಮ್ಮದೇ ಗ್ರಾಮದ ಮಾಜಿ ನಕ್ಸಲ್ ವೆಂಕಟೇಶ್ ಬಂದೂಕು ತೋರಿಸಿ ಬೆದರಿ-ಕೆ ಹಾಕಿದ್ದ. ಈ ಬಗ್ಗೆ ನಾನು ಪೊಲೀಸರಿಗೂ ದೂರು ನೀಡಿದ್ದೆ. ಹೇಗಾದರೂ ಮಾಡಿ ನನ್ನನ್ನು ಕೊಲೆ ಮಾಡಲು ಅವರೇ ಈ ಸಂಚು ರೂಪಿಸಲಾಗಿದೆ ಎಂದು ಆರೋಪಿಸಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

# ಜಿಲ್ಲಾಧಿಕಾರಿ ವಿರುದ್ಧ ಅವಹೇಳನ: ಶಾಕಸ ರೇವಣ್ಣ ವಿರುದ್ಧ ಕ್ರಮಕ್ಕೆ ಆಗ್ರಹ



ಕೂಡ್ಲಿಗಿ:ಹಾಸನ ಜಿಲ್ಲಾಧಿಕಾರಿ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿರುವ ಶಾಸಕ ಎಚ್. ಡಿ.ರೇವಣ್ಣ ಇವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ ಶ್ರೀ ರಾಜ ವೀರ ಮದಕರಿ ನಾಯಕ(ವಾಲ್ಮೀಕಿ) ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಶುಕ್ರವಾರ ತಹಶೀಲ್ದಾರ್ ವಿ. ಕೆ.ನೇತ್ರಾವತಿ ಮೂಲಕ ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಿದರು.

ಮಾಜಿ ಸಚಿವರು ಹಾಲಿ ಶಾಸಕ ಹೆಚ್.ಡಿ.ರೇವಣ ಹಾಸನದ ಜಿಲ್ಲಾಧಿಕಾರಿ ಕೆ. ಎಸ್.ಲತಾಕುಮಾರಿ ಇವರ ಮೇಲೆ ಅವಹೇಳನ ಮಾತುಗಳಿಂದ ದೌರ್ಜನ್ಯ, ನಡೆಸಿರುವುದು ಖಂಡನೀಯ ಕೂಡ್ಲಿಗಿ ತಾಲೂಕಿನ ಹಾಲಸಾಗರಹಟ್ಟಿ ಗ್ರಾಮದಲ್ಲಿ ಜನಿಸಿ ಬಡತನದಿಂದ ಐಎಎಸ್ ಪರೀಕ್ಷೆಯಲ್ಲಿ ತೇರ್ಗಡೆ-ಯಾಗಿ ಸಂವಿಧಾನಾತ್ಮಕವಾಗಿ ಜಿಲ್ಲಾಧಿಕಾರಿ ಹುದ್ದೆ ಅಲಂಕರಿಸಿದ ಪರಿಶಿಷ್ಟ ಪಂಗಡ ನಾಯಕ ಜನಾಂಗಕ್ಕೆ ಸೇರಿದ ಇವರ ಮೇಲೆ ಸಣ್ಣ ಕಾರಣಕ್ಕೆ ಶಾಸಕ ಹೆಚ್. ಡಿ. ರೇವಣ್ಣನವರು ಅವಹೇಳನದ ಮಾತುಗಳನ್ನು ಆಡಿರುವುದು ಅಕ್ಷಮ್ಯ ಅಪರಾಧವಾಗಿದೆ

ತಮ್ಮ ತಪ್ಪನ್ನು ತಿದ್ದಿಕೊಳ್ಳದಿದ್ದರೆ ರಾಜ್ಯಾದ್ಯಂತ ನಾಯಕ ಸಮಾಜ ಉಗ್ರ ಹೋರಾಟದಿಂದ ಪ್ರತಿಭಟನೆಯನ್ನು ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಈ ಸಂಧರ್ಭದಲ್ಲಿ ಟಿ.ಓಂಕಾರಪ್ಪ, ಮುಖಂಡರು ಕಾವಲಿ ಶಿವಪ್ಪನಾಯಕ, ಸಿ.ಬಿ.ಜಯರಾಂ ನಾಯಕ, ನಾಗಮಣಿ ಜಿಂಕಾಲ್, ಕಾಟೇರ ಹಾಲೇಶ್, ಬೊಮ್ಮಯ್ಯ, ನಿವೃತ್ತ ಪ್ರಾಚಾರ್ಯೆ ಡಾ.ಟಿ.ಕೊತ್ಲಮ್ಮ, ದೇವರಮನಿ ಮಹೇಶ್, ಜಿ.ಪಾಪನಾಯಕ, ತಳವಾರ ಶರಣಪ್ಪ, ಅಜೇಯ್ ನೀರ್ಕಲ್, ಶ್ರೀನಿವಾಸ್ ಕುಮಾರ್, ಪಂಪಾಪತಿ, ಮಲ್ಲಿಕಾರ್ಜುನ, ಕನಕೇರಿ ವೆಂಕಮ್ಮ, ಓಬಯ್ಯ, ದುರುಗೇಶ್, ನಾಗೇಂದ್ರ, ಹನುಮೇಶ್ ಸೇರಿದಂತೆ ಅನೇಕರು ಇದ್ದರು.

# ಮಹನೀಯರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು: ಶಾಸಕ ಡಾ.ಎನ್.ಟಿ. ಶ್ರೀನಿವಾಸ್



ಕೂಡ್ಲಿಗಿ:ಅಸಮಾನತೆ ವಿರುದ್ಧ ಹೋರಾಡಿದ ಮಹನೀಯರ ತತ್ವಾದರ್ಶಗಳನ್ನು ನಾವು ಜಯಂತಿಗೆ ಸೀಮೀತಗೊಳಿಸದೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಶಾಸಕ ಡಾ.ಎನ್.ಟಿ. ಶ್ರೀನಿವಾಸ್ ಹೇಳಿದರು. ಪಟ್ಟಣದ ತಾಲೂಕು ಕಚೇರಿಯಲ್ಲಿ ಶುಕ್ರವಾರ ತಾಲೂಕು ಆಡಳಿತ ಹಾಗೂ ಆರ್ಯ ಈಡಿಗ ಸಮಾಜದ ವತಿಯಿಂದ ಏರ್ಪಡಿಸಿದ್ದ ಬಹ್ಮರ್ಷಿ ನಾರಾಯಣ ಗುರು ಜಯಂತಿ ಹಾಗೂ ನುಲಿಯ ಚಂದಯ್ಯ ಜಯಂತಿ ಕಾರ್ಯಕ್ರಮದಲ್ಲಿ ಪುಷ್ಪ ನಮನ ಸಲ್ಲಿಸಿ.ಮಾತನಾಡಿದರು.

ಸಮಾಜದಲ್ಲಿದ್ದ ಮೇಲು,ಕೇಳು ಭಾವನೆ ತೊಲಗಿಸಿ ಸಮಾನತೆ ಸಾರಿದ ಆದರ್ಶ ಪುರುಷರನ್ನು ನಾವು ಜಯಂತಿಗಳ ಮೂಲಕ ಸ್ಮರಿಸಿ ಅವರು ಹಾಕಿದ ಪಥದಲ್ಲಿ ಸಾಗಬೇಕಿದೆ. ಯಾವುದೇ ಮಹನೀಯರ ಜಯಂತಿಗಳನ್ನು ನಾವು ನೆಪ ಮಾತ್ರಕ್ಕೆ ಮಾಡದೇ ಅರ್ಥಪೂರ್ಣವಾಗಿ ಆಚರಣೆ ಮಾಡಬೇಕಿದೆ, ಆ ನಿಟ್ಟಿನಲ್ಲಿ ನನ್ನ ಸಂಪೂರ್ಣ ಸಹಕಾರ ಇರುತ್ತದೆ ಜತೆಗೆ ಸಮಾಜಕ್ಕೆ ಸದಾ ನನ್ನ ಸಹಕಾರ ಇರುತ್ತದೆ ಎಂದು ತಿಳಿಸಿದರು.

ತಹಸೀಲ್ದಾರ್ ವಿ. ಕೆ.ನೇತ್ರಾವತಿ, ಆರ್ಯ ಈಡಿಗ ಸಮಾಜದ ತಾಲೂಕು ಅಧ್ಯಕ್ಷ ಮಂಜುನಾಥ, ಈ.ಸಂತೋಷ, ವೆಂಕಟೇಶ, ಧನಂಜಯ, ಬಾಬಣ್ಣ, ಗೀತಾ,ರವಿಕುಮಾರ್ ಸೇರಿದಂತೆ ಅನೇಕರು ಇದ್ದರು.

# ಖಾಸಗಿ ಸ್ಲಂಗಳನ್ನು ಸ್ಲಂ ಬೋರ್ಡ್‌ಗೆ ಹಸ್ತಾಂತರಿಸಿ ಹಕ್ಕುಪತ್ರ ನೀಡಲು ಆಗ್ರಹ

ಬೆಂಗಳೂರು : ವಿಜಯನಗರ ಜಿಲ್ಲೆಯ ಹೊಸಪೇಟೆ ನಗರದಲ್ಲಿರುವ ಖಾಸಗಿ ಮಾಲೀಕತ್ವದ ಕೊಳಚೆ ಪ್ರದೇಶಗಳನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಹಸ್ತಾಂತರಿಸಿ, ಅಲ್ಲಿ ಹಲವು ವರ್ಷಗಳಿಂದ ವಾಸಿಸುತ್ತಿರುವ ಸ್ಲಂ ನಿವಾಸಿಗಳಿಗೆ ಹಕ್ಕುಪತ್ರ ನೀಡುವಂತೆ ಒತ್ತಾಯಿಸಿ ಸ್ಲಂ ಜನರ ಸಂಘಟನೆ ಕರ್ನಾಟಕ ವಿಜಯನಗರ ಜಿಲ್ಲಾ ಸಮಿತಿಯಿಂದ ಮನವಿ ಸಲ್ಲಿಸಲಾಯಿತು.

ಆ.28ರಂದು ಸ್ಲಂ ಜನರ ಸಂಘಟನೆ ಕರ್ನಾಟಕದ ರಾಜ್ಯಾಧ್ಯಕ್ಷ ಐಸಾಕ್ ಅಮೃತ್ ರಾಜ್ ಅವರ ನೇತೃತ್ವದಲ್ಲಿ ಸಂಘಟನೆಯ ವಿಜಯನಗರ ಜಿಲ್ಲಾ ಸಮಿತಿ ಸದಸ್ಯರು ಬೆಂಗಳೂರಿನ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಕೇಂದ್ರ ಕಚೇರಿಯಲ್ಲಿ ಆಯುಕ್ತ ರಾಘವೇಂದ್ರ ಟಿ. ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ಹೊಸಪೇಟೆ ನಗರದಲ್ಲಿ ಒಟ್ಟು 60 ಘೋಷಿತ ಕೊಳಚೆ ಪ್ರದೇಶಗಳಿದ್ದು, ಅವುಗಳಲ್ಲಿ 25 ಕೊಳಚೆ ಪ್ರದೇಶಗಳು ಖಾಸಗಿ ಮಾಲೀಕತ್ವದಲ್ಲಿವೆ. ಈ ಪ್ರದೇಶಗಳು ಸ್ಲಂ ಬೋರ್ಡ್‌ಗೆ ಹಸ್ತಾಂತರವಾಗದ ಕಾರಣ ಅಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಹಕ್ಕುಪತ್ರ ಪಡೆಯಲು ಸಾಧ್ಯವಾಗುತ್ತಿಲ್ಲ ಎಂದು ಸಂಘಟನೆ ತಿಳಿಸಿದೆ.



ಕಳೆದ 40-50 ವರ್ಷಗಳಿಂದ ಒಂದು ಲಕ್ಷಕ್ಕೂ ಅಧಿಕ ಸ್ಲಂ ನಿವಾಸಿಗಳು ನಗರದಲ್ಲಿ ವಾಸಿಸುತ್ತಿದ್ದು, ಸರ್ಕಾರದ ದಾಖಲೆ ಅಥವಾ ಹಕ್ಕುಪತ್ರ ಇಲ್ಲದೆ ಅತಂತ್ರ ಸ್ಥಿತಿಯಲ್ಲಿ ಜೀವನ ನಡೆಸುತ್ತಿದ್ದಾರೆ. ಸ್ಲಂ ನಿವಾಸಿಗಳಿಗೂ ಸ್ವಾಭಿಮಾನದ ಬದುಕು ಹಾಗೂ ನಗರದಲ್ಲಿ ಶಾಶ್ವತ ಅಸ್ತಿತ್ವ ದೊರೆಯಬೇಕು ಎಂದು ಸಂಘಟನೆಯ ಮುಖಂಡರು ಆಯುಕ್ತರ ಗಮನಕ್ಕೆ ತಂದರು.

ಮನವಿ ಸ್ವೀಕರಿಸಿದ ಆಯುಕ್ತ ರಾಘವೇಂದ್ರ ಟಿ. ಅವರು ವಿಜಯನಗರ ಜಿಲ್ಲಾಧಿಕಾರಿಗಳಿಗೆ ದೂರವಾಣಿ ಮೂಲಕ ಸಂಪರ್ಕಿಸಿ, ಸ್ಲಂ ನಿವಾಸಿಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ವಿವರಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು. ವಿಜಯನಗರ ಜಿಲ್ಲೆಯ ಸ್ಲಂ ನಿವಾಸಿಗಳ ಕುಂದುಕೊರತೆಗಳ ಕುರಿತು ಪ್ರತ್ಯೇಕ ಸಭೆ ಕರೆಯಬೇಕು. ಪ್ರಧಾನಮಂತ್ರಿ ಆವಾಸ್ ಯೋಜನೆ ಹಂತ-1ರಡಿ ಸ್ಲಂ ಪ್ರದೇಶಗಳಲ್ಲಿ ನಿರ್ಮಾಣಗೊಂಡ ಮನೆಗಳ ಫಲಾನುಭವಿಗಳಿಗೆ ಬಾಕಿ ಇರುವ ಕಂತಿನ ಹಣವನ್ನು ಬಿಡುಗಡೆ ಮಾಡಬೇಕು. ಅರ್ಧಕ್ಕೆ ನಿಂತಿರುವ ಮನೆಗಳ ಕಾಮಗಾರಿಯನ್ನು ಪೂರ್ಣಗೊಳಿಸಬೇಕು ಎಂದು ಒತ್ತಾಯಿಸಲಾಯಿತು.

ಎಲ್ಲ ಸ್ಲಂ ನಿವಾಸಿಗಳಿಗೆ ಹಕ್ಕುಪತ್ರ ವಿತರಿಸಿ, ನೋಂದಣಿ ಪ್ರಕ್ರಿಯೆಯನ್ನು ಚುರುಕುಗೊಳಿಸಬೇಕು. ಸ್ಲಂ ಪ್ರದೇಶಗಳ ಚಕ್ಕುಬಂದಿ ಗುರುತಿಸುವ ಕಾರ್ಯವನ್ನು ಶೀಘ್ರ ಪೂರ್ಣಗೊಳಿಸಿ, ಅರ್ಹ ನಿವಾಸಿಗಳಿಗೆ ಹಕ್ಕುಪತ್ರ ವಿತರಿಸುವ ಕಾರ್ಯವನ್ನು ಕೂಡಲೇ ಆರಂಭಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಮನವಿಗೆ ಸ್ಪಂದಿಸಿದ ಆಯುಕ್ತ ರಾಘವೇಂದ್ರ ಟಿ. ಅವರು ಸಮಸ್ಯೆಗಳ ಕುರಿತು ಪರಿಶೀಲನೆ ನಡೆಸಿ ಆದಷ್ಟು ಬೇಗ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸಂಘಟನೆಯ ರಾಜ್ಯಾಧ್ಯಕ್ಷ ಐಸಾಕ್ ಅಮೃತ್ ರಾಜ್, ವಿಜಯನಗರ ಜಿಲ್ಲಾ ಸಮಿತಿ ಅಧ್ಯಕ್ಷ ಎಚ್. ಶೇಷು, ಉಪಾಧ್ಯಕ್ಷ ತನ್ವೀರ್ ಅಹ್ಮದ್, ಪ್ರಧಾನ ಕಾರ್ಯದರ್ಶಿ ಎನ್. ವೆಂಕಟೇಶ್, ಸಂಘಟನಾ ಕಾರ್ಯದರ್ಶಿ ಗುತ್ತಿ ಕೈಲಾಸ್, ಬೆಂಗಳೂರು ನಗರ ಸಮಿತಿ ಕಾರ್ಯದರ್ಶಿ ಅನ್ಬು ಅರಸನ್ ಹಾಗೂ ಬೆಂಗಳೂರಿನ ಮುಖಂಡ ಶಿವಲಿಂಗ ಸೇರಿದಂತೆ ಹಲವರು ಉಪಸ್ಥಿತರಿದ್ದರು.

EDITOR : S VENKATESULU, D.NO.: 4/38, MAIN ROAD, SETTUR, ANANTHAPUR, ANDHRA PRADESH - 515767, PUBLISHER : S VENKATESULU 237, Ward No 22 Talur Road, Lingamma Compund, Bellary, Bellary, Karnataka - 583101. KARNATAKA - 583113.
OWNER : S VENKATESULU D.NO.: 4/38, MAIN ROAD, SETTUR, ANANTHAPUR, ANDHRA PRADESH - 515767. PRINTER: VADDARA DODDA VEERESH, 1ST WARD, NAYAKARA ONI, AGASARA ONI, AT/POST-SOMALAPURA, BELLARY, KARNATAKA - 583101.